† ಶ್ರೀ ಆರ್. ಗುಂಡೂರಾವ್ (ಮಾನ್ಯ ವಿರೋಧಪಕ್ಷದ ನಾಯಕರು),— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಯುವಜನ ಸೇವಾ ರಾಜ್ಯ ಸಚಿವರಾದ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್ ಅವರು, ಶ್ರೀಮಾನ್ ಪ್ರಕಾಶ್ ಪಡುಕೋಣೆಯವರು ವಿಶ್ವ ಮಟ್ಟದ ಬ್ಯಾಟ್‌ಮಿಂಟನ್ ಆಟದಲ್ಲಿ ಯಶಸ್ಸು ಗಳಿಸಿದ್ದುದಕ್ಕಾಗಿ ಅಭಿನಂದಿಸಿದ್ದಾರೆ. ಶ್ರೀ ಪ್ರಕಾಶ್ ಪಡುಕೋಣೆ ಅವರು ವಿಶ್ವಮಟ್ಟದಲ್ಲಿ ಕೀರ್ತಿಯನ್ನು ಗಳಿಸಿದ್ದಕ್ಕಾಗಿ ನಮ್ಮ ಕಡೆ ಸದಸ್ಯರು ಮತ್ತು ಈ ಸಭೆ ಸರ್ವಾನುಮತದಿಂದ ಅವರನ್ನು ಅಭಿನಂದಿಸಬೇಕಾಗಿದೆ. ಮತ್ತು ಅವರಿಗೆ ಇನ್ನು ಮುಂದೆಯೂ ಇದೇ ತರಹ ಕೀರ್ತಿ ದೊರಕಲಿ. ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ತಮ್ಮ ಬ್ಯಾಟ್‌ಮಿಂಟನ್ ಆಟದಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿ ಭಾರತದ ಕೀರ್ತಿಯನ್ನು ಇಡೀ ವಿಶ್ವದಲ್ಲೇ ಹೆಚ್ಚಿಸುವುದರ ಜೊತೆಗೆ ಕರ್ನಾಟಕದ ಕೀರ್ತಿಯನ್ನೂ ಸಹ ಹೆಚ್ಚಿಸಲಿ ಎಂದು ಒಮ್ಮತದಿಂದ ಹಾರೈಸುತ್ತೇನೆ. ಮಾನ್ಯ ಯುವಜನ ಸೇವಾ ಮಂತ್ರಿಗಳು ಶ್ರೀ ಪ್ರಕಾಶ ಪಡುಕೋಣೆಯವರಿಗೆ ೧೦,೦೦೦ ರೂಪಾಯಿ ಬಹುಮಾನವನ್ನು ಕೊಡುವುದಾಗಿ ಪ್ರಕಟಿಸಿದ್ದಾರೆ. ಅದನ್ನೂ ನಾನು ಸ್ವಾಗತ ಮಾಡುತ್ತೇನೆ. ಯಾವುದಾದರೂ ಆಟದಲ್ಲಿ ವಿಭಾಗ ಮಟ್ಟದಲ್ಲೋ ಅಥವಾ ಅಂತರ ರಾಷ್ಟ್ರೀಯ ಮಟ್ಟದಲ್ಲೋ, ಅಥವಾ ರಾಜ್ಯ ಮಟ್ಟದಲ್ಲೋ ಗೆದ್ದರೆ ಈ ತರಹದ ಬಹುಮಾನವನ್ನು ಹಿಂದಿನಿಂದ ಕೊಡುವ ಪದ್ಧತಿ ಇದೆ. ಅದೇ ರೀತಿ ಈಗ ಅವರಿಗೆ ೧೦,೦೦೦ ರೂಪಾಯಿ ಬಹುಮಾನವನ್ನು ಕೊಟ್ಟಿರುವುದು ಸಂತೋಷ. ಅವರು ಕೀರ್ತಿಯನ್ನು ಗಳಿಸಿದ್ದರಿಂದ ಈ ವರ್ಷದಲ್ಲೇ ಸಾಧ್ಯವಾದರೆ ಬೆಂಗಳೂರು ನಗರದಲ್ಲಿ ಒಂದು ಉತ್ತಮವಾದ ಬ್ಯಾಟ್‌ಮಿಂಟನ್‌ಸ್ಟೇಡಿಯಂನ್ನು ನಿರ್ಮಾಣ ಮಾಡಿ ಈ ಕ್ರೀಡೆ ಇನ್ನೂ ಹೆಚ್ಚು ಅಭಿವೃದ್ಧಿಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಶ್ರೀ ಪ್ರಕಾಶ್ ಪಡುಕೋಣೆಯವರು ವಿಶ್ವಮಟ್ಟದಲ್ಲಿ ಕೀರ್ತಿಯನ್ನು ಗಳಿಸಿದ್ದಕ್ಕಾಗಿ ಅವರಿಗೆ ಮತ್ತೊಮ್ಮೆ ಅಭಿನಂದಿಸುತ್ತೇನೆ.

SRI S. R. BOMMAI,—I rise to associate myself with the fine sentiments expressed by the Hon. Minister and the Hon. Leader of the Opposition. Sri Padukone, is not only the pride of Karnataka but he is the pride of the country and I also wish him many more laurels and as suggested by the Hon. Leader of the Opposition, the Government in order to encourage sports, construct a Stadium or some sort of badminton court and name it after him.

Notice of motion of No-Confidence

MADAM DEPUTY SPEAKAR.— I have received a Notice of a Motion of No-Confidence in the Council of Ministers from Sri R. Gundu Rao, the Hon. Leader of the Opposition. The Hon. Leader of the Opposition may please seek leave of the House.

ಶ್ರೀ ಆರ್. ಗುಂಡೂರಾವ್ .— ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ದೇವರಾಜ ಅರಸ್ ಅವರು ಮಂತ್ರಿಮಂಡಲ ಈ ಸಭೆಯ ವಿಶ್ವಾಸವನ್ನು ಕಳೆದುಕೊಂಡಿದೆ. ಆದ್ದರಿಂದ ಈ ಒಂದು ಸೂಚನೆಯನ್ನು ಮಂಡಿಸುವುದಕ್ಕೆ ಮಾನ್ಯ ಉಪಾಧ್ಯಕ್ಷರು ಅಪ್ಪಣೆಯನ್ನು ಕೊಡಬೇಕೆಂದು ರೂಲ್ ೧೫೩ರ ಪ್ರಕಾರ ಕೇಳಿಕೊಳ್ಳುತ್ತೇನೆ.

MADAM DEPUTY SPEAKER.—Those who are in favour of leave being granted may please stand up.

(48 Members stood up in support of the motion)

MADAM DEPUTY SPEAKER :—Leave is granted. When shall we take up the motion ?

SRI R GUNDU RAO .— If the Leader of the House or the Deputy Leader of the House agrees, we have no objection to fix the time and

date in the Business Advisory Committee Meeting. From our side, we require about 25 hours because there are many charges which require detailed discussion I therefore seek the permission of the Chair to grant me at least 25 hours to our side.

SRI K. H. RANGANATH:— We can right now take up the Motion for discussion.

ಶ್ರೀ ಎಸ್. ಬಂಗಾರಪ್ಪ (ಸೊರಬ) :— ಮಾನ್ಯ ಉಪಾಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಗುಂಡೂರಾವ್ ಅವರು ಈ ಅವಿಶ್ವಾಸ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಇದನ್ನು ಚರ್ಚೆಗೆ ಯಾವಾಗ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಮಾತ್ರ ತಮ್ಮ ಮುಂದಿದೆ ಈ ಸಂದರ್ಭದಲ್ಲಿ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಶ್ರೀ ಕೆ. ಹೆಚ್. ರಂಗನಾಥ್ ಅವರು ಈಗಲೇ ಚರ್ಚೆಯನ್ನು ತೆಗೆದುಕೊಳ್ಳಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿರತಕ್ಕ ನಿಯಮಾವಳಿಯನ್ನು ತಾವು ಗಮನಕ್ಕೆ ತೆಗೆದುಕೊಳ್ಳುವುದಾದರೆ ಇದೇ ದಿವಸ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿಯಮಾವಳಿಯಲ್ಲಿಲ್ಲ.

ಆದುದರಿಂದ ಈ ಬಗ್ಗೆ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಿರತಕ್ಕಂಥಾ ಒಂದು ಸಮಿತಿ ಇದೆ. ಮಾನ್ಯ ವಿರೋಧಪಕ್ಷದ ನಾಯಕರು ನಮಗೆ ೨೦-೨೫ ಗಂಟೆಗಳಕಾಲ ಇದಕ್ಕೆ ಬೇಕಾಗುತ್ತದೆ ಎಂದು ತಿಳಿಸಿದ್ದಾರೆ ಅವರ ಕಡೆಗೆ ಎಷ್ಟು ಗಂಟೆಗಳ ಕಾಲ ಬೇಕು ಎನ್ನುವುದನ್ನು ಸಹ ತಿಳಿಸಬೇಕು.

ಎರಡನೆಯದಾಗಿ ಇದಕ್ಕೆ ಇಷ್ಟು ಗಂಟೆಗಳ ಕಾಲ ಬೇಕಾಗುತ್ತದೆ ಎನ್ನುವುದನ್ನು ಗೊತ್ತು ಮಾಡುವುದಕ್ಕಾಗಿ ತಾವು ಪ್ರತ್ಯೇಕವಾಗಿ ಈ ಸಭೆಯನ್ನು ಕರೆದು ಇದಕ್ಕೆ ಒಂದು ಕಾಲವನ್ನು ನಿಗದಿ ಮಾಡಬೇಕು. ನಾನು ತಮ್ಮ ಮುಂದೆ ಇನ್ನೊಂದು ವಿಷಯವನ್ನು ಗಮನಕ್ಕೆ ತರುವುದೇನೆಂದರೆ ಈ ಚರ್ಚೆಯನ್ನು ಇದೇ ದಿವಸವೇ ತೆಗೆದುಕೊಳ್ಳುವುದಕ್ಕೆ ಬರುತ್ತದೆ ಎಂದು ಹೇಳುತ್ತಾ ಇಲ್ಲಾ. ಈ ಬಗ್ಗೆ ರೂಲ್ ೧೫೩ ಎನು ಇದೆ ಅದನ್ನು ಒಂದು ಸಾರಿ ತಮ್ಮ ಮುಂದೆ ಓದಿಬಿಟ್ಟರೆ ಎಲ್ಲರಿಗೂ ಅನುಕೂಲವಾಗುತ್ತದೆ. ಇದರ ಬಗ್ಗೆ ಯಾರಿಗೂ ಏನು ಅನುಮಾನ ಬೇಕಾಗಿಲ್ಲಾ. ಅದು ಈ ರೀತಿ ಇದೆ;—

153. (1) A motion expressing want of confidence in the Council of Ministers may be made subject to the following restrictions, namely;—

(a) leave to make the motion must be asked for after questions and before the list of business for the day is entered upon;

(b) the member asking for leave shall. before the commencement of the sitting of that day, give to the Secretary a written notice of the motion which he proposes to move. This we have done.

(2) If the Speaker is of opinion that the motion is in order he shall read the motion to the Assembly and shall request these members who are in favour of leave being granted to raise in their places and if not less than thirty members rise accordingly, the Speaker shall intimate that leave is granted and that the motion will be taken up the next day,or within three days thereafter as the Speaker decides. if less than thirty members rise, the Speaker shall inform the member that he has not the leave of the Assembly.

ಆದನ್ನು ಮಾಡಿದ್ದೇವೆ. ಮತ್ತು ಇದಕ್ಕೆ ೩೭ ಜನ ಏನು ಬೇಕಾಗಿದೆ. ಅದಕ್ಕಿಂತಲೂ ಹೆಚ್ಚು ನಿಂತಿದ್ದೇವೆ. ಮತ್ತು ಅವರ ಅಭಿಪ್ರಾಯವನ್ನು ಕೂಡ ತಮಗೆ ತಿಳಿಸಿದ್ದೇವೆ.

(3) If leave is granted under sub-rule (2) the Speaker may after consider the state of business in the Assembly allot a day or days or part of a day for the discussion of the motion.

ಈವೊತ್ತೇ ಇದು ಬರುವ ಹಾಗಿಲ್ಲಾ. ಆದದುರಿಂದ ಈಗ ಮೋಷನ್ ಎನು ಇದೆ ಅದನ್ನು ನಾಳೆ ತೆಗೆದು ಕೊಳ್ಳಿ ಈವೊತ್ತಿನ ದಿವಸ ಇರತಕ್ಕಂಥಾ ಕಾರ್ಯಕಲಾಪಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ

This rule prohibits talking up the motion today it self. Madam Speaker, 1 am bringing this matter to your kind notice.

(4) The Speaker shall, at the appointed hour on the allted day or the last of the allotted days, as the case may be forth with put every question necessary to determine decision of the Assembly on the motion.

(5) The Speaker may, if he thinks fit, prescrible a time limit for speeches.

ಆದುದರಿಂದ ಇದು ತಮಗೆ ಬಿಟ್ಟಿರತಕ್ಕ್ಂಥಾ ವಿಷಯ. ಈ ದೃಷ್ಟಿಯಿಂದ ಮಾನ್ಯ ಸಂಸದೀಯ ಸಚಿವರು ತಿಳಿಸಿದ ಹಾಗೆ ಇದು ಈ ನಿಯಮಾವಳಿ ಒಳಗೆ ಬರುವ ಹಾಗಿಲ್ಲ. ಇದೇ ನನ್ನ ಕ್ರಿಯಾಲೋಪ.

ಶ್ರೀ ಟಿ.ಆರ್. ಶಾಮಣ್ಣ: ಮಾನ್ಯ ಗುಂಡೂರಾಯರು ಮತ್ತು ಮಾನ್ಯ ಬಂಗಾರಪ್ಪನವರು ಈಗ ಅವಿಶ್ವಾಸ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದಾರೆ. ಸ್ವಾಮಿ, ನನ್ನ ಕ್ರಿಯಾಲೋಪ ಏನು ಎಂದರೆ ಮಾನ್ಯ ಗುಂಡೂರಾಯರು ಮತ್ತು ಮಾನ್ಯ ಬಂಗಾರಪ್ಪನವರು—they were Cabinet Ministers and they are respensible for most of the atrocities. Can a motion be brought by these persons who have committed sin? Can it be accepted for discussion here

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ಏನು ಒಂದು ಅವಿಶ್ವಾಸ ನಿರ್ಣಯವನ್ನು ಇಲ್ಲಿ ಮಂಡನೆ ಮಾಡಿದ್ದಾರೆ ಅದರ ಬಗ್ಗೆ ಚರ್ಚೆಯನ್ನು ಈಗಲೇ ತೆಗೆದುಕೊಳ್ಳಬೇಕು ಅನ್ನುವುದರ ಬಗ್ಗೆ ಮಾನ್ಯ ಸಂಸದೀಯ ಸಚಿವರು ಹೇಳಿದ್ದಾರೆ. ರೂಲ್ ೧೫೩ ರ ಪ್ರಕಾರ ಯಾವ ಒಂದು ವಿಷಯವನ್ನು ಸರ್ಕಾರದ ವಿರುದ್ದವಾಗಿ ಅವಿಶ್ವಾಸ ನಿರ್ಣಯ ಮಂಡನೆ ಮಾಡಿದಂಥಾ ಕಾಲದಲ್ಲಿ ಸರ್ಕಾರ ವಾಗಲಿ ಅಥವಾ ತಾವೇ ಆಗಲಿ ಅದಕ್ಕೆ ಸಿದ್ಧರಿದ್ದೇವೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗಬಹುದು ಎಂದು ಹೇಳತಕ್ಕಂಥಾದ್ದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲಾ. ಬಹುಶಃ ಈ ಸದನದಲ್ಲಿ ಕಳೆದ ೩೦ ವರ್ಷದಿಂದಲೂ ಕೂಡ ಹಲವಾರು ಅವಿಶ್ವಾಸ ನಿರ್ಣಯಗಳು ಬಂದುಹೋಗಿವೆ. ಆದರೆ ಇದಕ್ಕೆ ಚರ್ಚೆ ಕಾಲವನ್ನು ಮಾತ್ರ ಗೊತ್ತು ಮಾಡಬೇಕಾಗುತ್ತದೆ. ಇದರ ಬಗ್ಗೆ ತಾವೇನು ನಿಲುವು ತೆಗೆದುಕೊಳ್ಳುತೀರಿ ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲಾ. ಆದರೆ ಈ ಬಗ್ಗೆ ವಿರೋಧಪಕ್ಷದವರು ಚರ್ಚೆ ಮಾಡುವುದಕ್ಕೆ ೨೫ ಗಂಟೆಗಳ ಕಾಲ ಬೇಕು ಎಂದು ತೀರ್ಮಾನ ತೆಗೆದುಕೊಳ್ಳುವುದಾದರೆ ಅಷ್ಟು ಕಾಲ ವನ್ನು ಈ ಸದನದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲಾ. ಅಲ್ಲೇ ಮೀಟ್ ಆಗಿ ಇದರ ಬಗ್ಗೆ ಎಷ್ಟು ಗಂಟೆ ಗಳಕಾಲ ಬೇಕು ಎನ್ನುವುದನ್ನು ನಿರ್ಣಯ ಮಾಡಬೇಕು. ಆದುದರಿಂದ ಸಭಾಧ್ಯಕ್ಷರೇ, ಈ ಬಗ್ಗೆ ಅನಿವಾರ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬರಲಿಕ್ಕೆ ಆಗದೇ ಹೋದರೆ ಅವರ ಪ್ರತಿನಿಧಿಯಾಗಿ ಯಾರನ್ನಾದರೊಬ್ಬರನ್ನು ಕರೆಸಿ ಮತ್ತು ಇತ್ತ ಕಡೆ ವಿರೋಧಪಕ್ಷದ ಮುಖಂಡರನ್ನೂ ಕರೆಸಿ ಒಂದು ನಿರ್ಣಯವನ್ನು ತೆಗೆದುಕೊಳ್ಳಿ ಅದಕ್ಕೆ ಇಂತಿಷ್ಟು ಕಾಲ ಅಂತ ಗೊತ್ತು ಮಾಡಿ. ಈ ಸಂದರ್ಭದಲ್ಲಿ ತಮಗೆ ಒಂದು ವಿಷಯವನ್ನು ಜ್ಞಾಪಕಕ್ಕೆ ತರಬೇಕಾದರೆ ಮೊನ್ನೆ ಅಂದರೆ ಈಚೆಗೆ ಸ್ವಲ್ಪ ದಿವಸದ ಹಿಂದೆ ಲೋಕ

ಸಭೆಯಲ್ಲಿ ಅವಿಶ್ವಾಸಮಂಡನೆ ಮಂಡಿಸಿದಾಗ ಹಿಂದಿನ ಪ್ರಧಾನ ಮಂತ್ರಿಗಳು ಈ ರೀತಿ ಹೇಳಿದರು right now it can be taken up for discussion ಎಂದು ಸ್ಪೀಕರ್ ಸಹ ಇದನ್ನು ಹೀಗೆಯೇ ತೆಗೆದುಕೊಳ್ಳುವುದ ಕ್ಕಾಗುವುದಿಲ್ಲ ಇದಕ್ಕೆ ಸರ್ಕಾರದ ಪ್ರತಿನಿಧಿಯೊಬ್ಬರನ್ನು ಕರೆಸಿ ಮತ್ತು ವಿರೋಧಪಕ್ಷ ದವರನ್ನು ಕರೆಸಿ ಇದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ಅನ್ನುವುದನ್ನು ಗೊತ್ತು ಮಾಡಬೇಕಾಗುತ್ತದೆ ಎಂದು ಹೇಳಿದರು. ಈವೊತ್ತು ಈ ಒಂದು ಚರ್ಚೆಯನ್ನು ತೆಗೆದುಕೊಳ್ಳ ಬೇಕಾಗಿರುವುದರಿಂದ ಅದಕ್ಕೆ ಹೆಚ್ಚು ಕಾಲ ಬೇಕಾಗುತ್ತದೆ. ಆದರಿಂದ ಈವೊತ್ತಿನ ಅಜೆಂಡಾದಲ್ಲಿರತಕ್ಕಂಥಾ ಕಾರ್ಯ ಕಲಾಪಗಳನ್ನು ಪೂರ್ತಾ ಮುಗಿಸುವುದಕ್ಕಾಗುವುದಿಲ್ಲ. ಆದುದರಿಂದ ಈ ಬಗ್ಗೆ ಇಬ್ಬರೂ ಸೇರಿ ಈ ನಿರ್ಣಯವನ್ನು ಈವೊತ್ತೇ ತೆಗೆದುಕೊಳ್ಳಬೇಕು ಅಂತ ಒಂದು ನಿರ್ಣಯ ತೆಗೆದುಕೊಳ್ಳುವುದಾದರೆ ಅದಕ್ಕೆ ನಾವೂ ಕೂಡ ಬದ್ಧರಾಗಬೇಕಾಗುತ್ತದೆ ಅದಕ್ಕೆ ಬೇರೆ ಕೌಂಟರ್ ಆಕ್ಟ್ ಮಾಡುವುದಕ್ಕೆ ಶಾಧ್ಯವಿಲ್ಲ ಬಹುಶಃ ಇದನ್ನು ಮಾನ್ಯ ಸಂಸದೀಯ ಸಚಿವರೂ ಸಹ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ

ಶ್ರೀ ಕೆ.ಹೆಚ್. ರಂಗನಾಥ್;—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ ಆರೋಗ್ಯ ಚೆನ್ನಾಗಿಲ್ಲದಿದ್ದರೂ ಕೂಡ ಬಹುಶ: ಅವರು ಈ ಸಭೆಗೆ ಬರುತ್ತಾರೆ ಅನ್ನುವ ಅಭಿಪ್ರಾಯ ಇದೆ. ಮಾನ್ಯ ದೇವೇಗೌಡರು ಈ ಬಗ್ಗೆ ಪ್ರಸ್ತಾಪ ಮಾಡುತ್ತಾ ಮೊನ್ನೆ ಲೋಕಸಭೆಯಲ್ಲಿ ಈ ಬಗ್ಗೆ ಏನಾಯಿತು ಅನ್ನುವುದನ್ನು ತಮ್ಮ ಗಮನಕ್ಕೆ ತಂದಿದ್ದಾರೆ ಹಾಗೂ ಈಬಗ್ಗೆ ಏನು ಒಂದು ತೀರ್ಮಾನ ತಾವು ತೆಗೆದುಕೊಳ್ಳುತ್ತೀರೋ ಅದೂ ಕೂಡ ಅಂತಿಮವಾದುದು ಎನ್ನುವುದನ್ನು ಹೇಳಿದರು ಮಾನ್ಯ ಬಂಗಾರಪ್ಪನವರು ರೂಲ್ ೧೫೩ಅನ್ನು ಪ್ರಸ್ತಾಪ ಮಾಡುತ್ತಾ ಇದನ್ನು ನಾಳೆ ಅಥವಾ ೩ದಿವಸದೊಳಗಾಗಿ ತೆಗೆದುಕೊಳ್ಳಬಹುದು ಅನ್ನುವ ಮಾತನ್ನು ಹೇಳಿದ್ದಾರೆ. ವಿರೋಧಪಕ್ಷದವರ ಅಭಿಪ್ರಾಯದ ಪ್ರಕಾರ ಈ ಅವಿಶ್ವಾಸ ನಿರ್ಣಯ ಬಹಳ ಮಹತ್ವವಾದುದಂಥಾ ನಿರ್ಣಯ ಇದಕ್ಕೆ ಹೆಚ್ಚಿನ ಆದ್ಯತೆ ಕೊಡತಕ್ಕಂಥಾದ್ದು ಅವಶ್ಯಕತೆ ಇದೆ. ಈ ದೃಷ್ಟಿ ಯಿಂದ ವಿಚಾರ ಮಾಡುವಾಗ ಈ ಪತ್ರಿನ ಬಿಸಿನಸ್ ಎಲ್ಲ ಏನು ಇದೆ ಅದನ್ನೂ ಸಹ ತಾವು ನೋಡ ಬೇಕು. ಅದಾಗ್ಯೂಕೂಡ ಇದರ ಬಗ್ಗೆ ತಮಗೆ ಪೂರ್ಣ ಅಧಿಕಾರ ಇದೆ ಎನ್ನುವ ಮಾತನ್ನು ಹೇಳುತ್ತಾ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಕೌಲ್ ಅಂಡ್ ಶಕ್ಧರ್ ಅವರು ಏನು ಒಂದು ಬರೆದಿದ್ದಾರೆ ಅದನ್ನು ಈ ಸಂದರ್ಭದಲ್ಲಿ ಓದುತ್ತೇನೆ. ಅದು ಈರೀತಿ ಇದೆ;—

> A motion of no-confidence is required to be taken up within ten days from the date on which the leave to move it, is granted by the House. in fixing the date for the discussion of such a motion, the Speaker may ask the Leader of the House to suggest to him the date or dates in consultation with the leaders of various Opposition parties or groups Time for discussion of the motion may be allotted by the House on the recommendation of the Business Advisory Committe, or the Speaker may, after considering the state or business in the House, himself allot a day or days for this purpose. The time so allotted can, however, be extended with the consent of the House. ಈ ದೃಷ್ಟಿಯಿಂ ದ ಈ ಬಗ್ಗೆ ತಮಗೆ ಪೂರ್ಣ ಹಕ್ಕು ಇದೆ ಎಂದು ಹೇಳುತ್ತೇನೆ.

೨.೩೦ ಪಿ. ಎಂ.

ತಾವು ವಿರೋಧ ಪಕ್ಷದ ನಾಯಕರನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಕರೆದು, ಇದು ತಮಗೆ ಗಹನವಾದ ವಿಚಾರವೆಂದು ಮನಸ್ಸಿಗೆ ಬಂದು ತಮ್ಮ ಅಭಿಪ್ರಾಯದಲ್ಲಿ ಇದನ್ನು ಈಗಲೇ ತೆಗೆದುಕೊಳ್ಳ ಬೇಕು ಎಂದರೆ ಅದಕ್ಕೂ ಕೂಡ ಅವಕಾಶವಿದೆ. ತಾವು ತಮ್ಮ ಅಧಿಕಾರವನ್ನು ಉಪಯೋಗ ಮಾಡಿ ಸಭೆಯ ಅನುಮತಿಯನ್ನೂಪಡೆದು ಕಾಲ ನಿಗಧಿ ಮಾಡಿ ಇವತ್ತೆ ಇದನ್ನು ತೆಗೆದುಕೊಳ್ಳಬೇಕು ಎನ್ನ ತಕ್ಕದ್ದಕ್ಕೆ ಅವಕಾಶ ಇಲ್ಲವಿಲ್ಲ. ತಮಗೆ ಪೂರ್ಣಅಧಿಕಾರ ಇದೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಸದಸ್ಯರು ಸಭೆಯ ಮುಂದೆ ಈ ನಿರ್ಣಯವನ್ನು ಏನು ಮಂಡಿಸಿದ್ದಾರೆ, ಅದು ಗಹನವಾದುದು

ನಾನು ಸರ್ಕಾರದ ವತಿಯಿಂದ ಹೇಳುವುದಾದರೆ. ತಾವು ತಮ್ಮ ಅಧಿಕಾರವನ್ನು ಉಪಯೋಗ ಮಾಡಿ ಈಗಲೇ ಇದನ್ನು ತೆಗೆದುಕೊಳ್ಳಬೇಕೇ ಅಥವಾ ಇದಕ್ಕೆ ಎಷ್ಟು ಕಾಲ ಬೇಕು ಎಂದು ನಿಗಧಿ ಮಾಡಿ ಇವತ್ತೆ ಮುಂಗಿಸಬೇಕು ಎಂದು ಹೇಳುವುದಾದರೆ ನಮ್ಮ ಅಡ್ಡಿಯೇನೂ ಇಲ್ಲ. ಸರ್ಕಾರ ಈ ದಿಸೆಯಲ್ಲಿ ವಿರೋಧ ಪಕ್ಷದ ಜೊತೆಗೆ ಸಹಕರಿಸುವುದಕ್ಕೆ ತಯಾರಿದೆ; ಏನನ್ನುವುದನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

SRI S. R. BOMMAI.—Madam, on this point I don't want to repeat the rule. I am inclined to agree with the Hon. Minister for Parliamentary Affairs so far as the allotment of time is concerned. So far as that is concerned, it is entirely at the discretion of the Chair. The discretion of the Speaker is also restricted by the rules and it must be judiciously exercised. I need not say that a no-confidence motion is rarely moved as a last weapon by the Opposition. It is of the utmost importance in a parliamentary democracy that a no-confidence motion must be given due importance and sufficient time should be given to the Opposition as well as to the Government to discuss it. So far as the rule or the conventions in the Lok Sabha or in any Assembly are concerned, nowhere is the motion to be taken up on the same day

SRI M. C. NANAIAH.—When the no-confidence motion was brought up against the Morarji Desai Ministry in the Lok Sabha in the last session, it was taken up the same day.

SRI S. R. BOMMAI.—As I said, nowhere it has been taken up on the same day. Even in the Lok Sabha I might remind the hon. Memmer Sri Nanaiah, though the then Prim Minister suggested that it might be taken up the same day, the Speaker did not agree with him and it was taken up on the next day and five days were allotted for discussion.

SRI M. C. NANAIAH.—It was taken up in the Lok Sabha on the afternoon of the same day.

SRI S. R. BOMMAI.—I would refer only to one sentence in sub-rule (2) of rule 153. It says, "..... the Speaker shall intimate that leave is granted and that the motion will be taken up the next day, or within three days thereafter as the Speaker decides". So, it cannot be taken up on the same day. There is no necessity of a discussion at all, After the leave is granted it is incumbent and mandatory on the Speaker to intimate the House that it will be taken up on the next day or within three days thereafter. So, there is no choice left to the Speaker and there is no scope for argument or interpretation. If we go through the entire record of our legislature it has always been taken up the next day or on some other day. So far as the time is concerned, after hearing both the sides, the Speaker may decide adout it. I do not know why in such matters Government should stand on prestige. I particularly welcome the state

ment of the Hon.Minister for Parliamentary Affairs which is very co-operative. It must be taken in a sportive spirit, Today we have raised very important issues and they should be taken up. For the last four days we have not been able to raise those issues. In my opinion some of the issues we have raised are very important and they must be taken up today. The rule is mandatory and the motion may be taken up tomorrow or any day thereafter. So far as the time to be allotted is concerned. instead of our exchanging views here the Speaker may call the Business Advisory Committee and decide.

* SRI M. VEERAPPA MOILY.—Madam, as our leader has put it, is incumbent on the Speaker to exercise discretion according to the collective wi dom of the House. After 1969 no such no-confidence motion has been moved in this House. So, it is of a very unique nature and we have brought it before this House with all seriousness and I thought when it is before the H use the hon. the Deputy Leader of the House Sri K. H. Ranganath would take it sportively. Instead of suddenly rising up and saying that let it be ta en up right now he could have had the courtesy to discuss the issue with the Leader of the Opposition because after all we are not working in vacuum. As already pointed out by the hon member Sri Bommai, the rule is very clear and it clearly says that it has got to be taken up the next day or within 3 days thereafter as the Speaker decides. E en in the book w ich was quoted by Sri K. H. Ranganath, writ en by M. N Kaul, and Shakhdar, on page 591, in a very crisp form they have clearly stated what should be the course of action open for the Speaker to act in case leave is sought and granted to move a no confidence motion. It is very clearly said that in fixing a date for the discussion of such a motion, of course the Speaker will first ask the leader of the House to suggest to him a date or dates in consultation with the leaders of various opposition parties or groups. After all it is not open even for the leader of the House to suggest a date arbitrarily. He has got to consult the Leader of the Opposition and the Opposition groups and then suggest a date to the Speaker.

SRI K. H. RANGANATH.—Let us not quote as we quote in the courts as lawers. Quote what is wanted.

SRI M. VEERAPPA MOILI.—As far as practice of the House or Lok Sabha is concerned, the Speaker immediately asks for the suggestion of the Leader of the House and the Leader in turn consults all the Opposition l aders and groups and then suggests. After all it is not open even for the Leader of the House to suggest a date or time arbitrarily without consulting any member of this House I do not think that it will be fair to fix time arbitrarily in the background of

the precedents we have and the custom which have been practised from time to time.

So further time for discussion on the motion may be allotted on the recommendations of the Business Advisory Committee. After all, for allotment of time particularly for a motion of this type, there is the Business Advisory Committee. The Deputy Leader of the House does not want to follow even the course which are open under the rules. The rule says "the Speaker after considering the state of business in this House can himself allot a dayor days for this purpose". Afterall. the Speaker is guided by the rules, by the pratice by the procedure and by the authorities. After all, he or she does not work is a vacum. He will have to consult the authorities and the practice which is before us The time so allotted can be extended with the consent of the House. Even the Speaker cannot consult entire House. According to the precedents that are available to us and according to the authorities available to us, the House can be consulated only after a date is fixed. The position is very clear. There are precendents in the Lok Sabha. I have not cited them because of the authority of Kaul and Shakhdar book, which is very clear, So many options are given to the Speaker and how the discretion will have to be excercised is also given. I will quote from the Debate of the Lok Sabha dated 13th August 1963. It says :

> "I have to fix some time. The Government was asked and they have been asked to fix only after consulting the Opposition Leader".

In view of this, the practice and procedure is very clear. The discretion cannot be capricious. It will have to be exercised according to the practice before you. The rules of procedure is mandatory It says :

> 'Next day or three days thereafter ;.

In view of the business which is before us, I have given a notice of matter under rule 312 about the kidnaping and gruesome murder of children inBangalore city which is terrifying thecitizen ofthe Bangalor City and the State and the Yadgir issue which is before you-and there are a number of other issues before this House. Only in the case of adjournment motion the entire business will have to be set aside and in the case of no-confidence motion which has to be admitted, there is no setting aside of the Business of the House. So this is a serious matter which will have to be taken up and opportunity will have to be given to the Opposition parties also Therefore, in all aspects due opportunity will have to be given to the Opposition parties also and also for the treasury benches, if at all they want to defend

and if these proper opportunities are denied, I think the very concept of non-confidence motion will be defeated and we will be deprived of avai ing this opportunity, the last weapon with which we can censure the G vernment. the commissions and commissions and lapses on the part of the Governm-nt. In view of this, my earnest request before the Hon. Speaker is to consider the rules and practice which are very clear and also the precedents which are bef re this House. This may be taken up by the Business Advisory Committee and time may be fixed and proper opp rtuni ies may be given to the House to discuss this no-confidence motion. In view of this mandatory provision I do not think the Leader of the House can say that it could be straightway taken up.

MADAM DEPUTY SPEAKER.—It is not as if we cannot take up the motion right now. The precedents are both ways. There is no bar for taki g up the mo ion now itself. There are instances when the motion of no-confidence has been taken up the same day. It is the House which has to determine when it should be done.

(INTERRUPTIONS)

I will read and what happened in the Lok Sabha. Lok Sabha met in the Parli ment at 11 O'clock on 10th May 1978. The Speaker informed the House about the receipt of two notices of no-confidence in the C u cil of Mi i ters give notice of by Sri C. M. Stephen. Sri Hithendr Desai Sri T. A. Pai. Sri K. Gop lan and Sri K. Lakkappa. Sri C. M. Stephen sought leave of the House to m ke a mot on of no-confidence in the Council of Ministers The Speaker asked those Members who were in f vour of leave being granted to Sri C M. Stephen to make a motion of no-confidence in the Council of Minister to rise in the places. As not les than 50 Members ros e. the Speaker declared that leave was granted and the mo ion would be taken up at 2-00 P.M. today. It was taken up on the same day.

I just brought this to your notice. According to the Business Advisory C mmittee today is the last day of our meeting. As you have s id there are many serious matters to be taken up for co si-dera ion, I say if you could take it up today it will be helpful.

SRI N. SHEERNALY CHANDRASHEKAR —Rule 153 is mandatory.

MADAM EPUTY SPEAKER.—It has not specifically stated that it should not be taken up

† SRI A. LAKSHMISAGAR(Chickpet).—I thank you for having brought to the notice of the House the precedent fo lowed in the Lok Sabha. So f r so good. But I must bring to your notice the rules

that are framed for the conduct of transaction of the business of this House under article 194 of the Constitution We do not know the rule which lays down the manner in which the no confidence motion should be taken up so far as Lok Sabha in concerned. The rule is not quoted either by Shakdar or anybody else. Therefore, the rules are different from State to State on the one side and Centre on the other. So, it would be wrong to assume that whatever is decided by the Lok Sabha is binding on this House. It may have some persuasive value.

MADAM DEPUTY SPEAKER.—I never said it is binding.

SRI A. LAKSHMISAGAR.—I agree. It has only persuasive value. The rules are framed by different legislatures for their guidance and conduct of business. What rule is there in respect of no-confidence motion, that rule is not here in our rules. We are guided by the rules framed by this House, pursuant to Art. 194. Therefore it shall have precedence over what you stated or decided by the Lok Sabha. The rule relating to this matter says ; that after having got sufficient number of members in support of the no confidence motion the Speaker "Shall take it up the next day or within three days thereafter as the Speaker decides". What is the meaning that you are going to give to these words ? We are guided by the language of the rule. When the rule and the language embodying that rule is clear and unambiguous there is no need to seek guidance from outside. This is my submission. We are bound by our rules. If the rule is not clear and if the rule is equivocal and it means different thing for different people, we may seek guidance from other sources. It is one of the basic principles of any statute that if the rule is clear and unambiguous there is no point in seeking guidance from outside. That is the position. There can be no ambiguity about the language or import of meaning of the words in the rule. Therefore my submission is we have to go by the rules and not by what the Lok Sabha has decided or what Shakdar says.

† SRI G. P. VADEYARAJ (Kamalapur).—I do not want to repeat the arguments advanced by Sri A. Lakshmisagar and also the rules that you were kind enough to quote—one instance where no-confidence motion was taken up. I may bring to your notice what happened in this Assemby on only one occasion. You were good enough to say that in the Lok Sabha the motion of no confidence was taken up the same day on one occasions and not on many occasions. What I want to bring to your kind notice is that on many occasions the no-confidenee motion was taken up on other days. I will quote the example of Karnataka wherein no-confidence motion was taken up on other days. The first instance was on 3-3-1961 when no-confidence motion was moved and

it was taken up on 4-3-61, 6-3-61 and 9-3-61. The next occasion was 21-9-62, and it was discussed on 26th and 27th September 1962. On 5-10-63 a motion was moved and it was discussed on 7th and 8th October 1963. On 18th November 1965 a no-confidence motion was moved and on the same day it was discussed. This is the only solitary example of Karnataka Legislative Assembly when it was taken up on the same day. In 1966, on the 20th November a motion was moved and it was taken up on 25th : Like that in the subsequent years also on different days the motions have been discussed. According to the Business Advisory Committee today is the last day. Therefore, necessarily we have got to extend the sitting of the House. So, when the session of the House has got to be extended, necessarily the Business Advisory Committee comes into the Picture. When we have to discuss this motion for 3 or 4 days, the session has to go on beyond today.

Secondly, the rules say that whenever a no-confidence motion is brought the leaders of political parties have got to be consulted. Therefore, my submission is that you kindly call a meeting of the Business Advisory Committee. As our leaders said each party may require some time to speak on the motion and the treasury bench also may like to take some time to answer. All these things involve some time. Since today is stated as last day, you kindly call the Business Advisory Committee which is capable of deciding or authorise you to extend the sittings of this House.

3 P. M.

SRI D. DEVARAJ URS (Chief Minister).—Madam Deputy Speaker, now the question before us is, whether the motion should be taken up today or tomorrow As you have rightly pointed out, the Business Advisory Committee has fixed today as the last day for this session, and our friends on the other side cannot plead ignorance of the fact that this Session was to close today. They could have sent the same motion even earlier if they wanted more time Knowing full well that the House is to close today, I do not know why they thought of bringing it only today, and having brought it so late they want the House to be continued tomorrow also. I am afraid it is not possible however much they might argue. I would like to point out the specific rules which are to govern the motions—Chapter XVI-Motions. Under Chapter XVI-Rule 150 says :—

> "The Speaker may, after considering the state of business in the Assembly and in consultation with the Leader of the House, allot a day or days or part of a day for the discussion of any such motion"

This rule should be read along with the other rule which govern motion of no-confidence, which has been just now quoted—I do not want to go into the details again and again. So, they cannot merely quote Rule 153, which perhaps they think it is to their advantage. This governs all the 'motions' ; it is not either this motion or that motion. The Chapter itself clearly says : 'motions'. When we are prepared to face the 'no-confidence' motion, I do not know why my friends are hesitating.

SRI G. P. VADEYARAJ.—No hesitation.

SRI D. DEVARAJ URS.—It was stated that their party want 24 hours, other 20 hours and so on. They may be having the capacity to speak for any length of time. But it is the House which has to decide If the Lok Sabha example is not convenient to the they want that to be forgotten completely and they want some other thing to be done. I am sorry, I cannot oblige. We have to sit today, even if it is one or two hours late and we have to finish it.

ಶ್ರೀ ಎಚ್. ಡಿ. ದೇವೇಗೌಡ –ಸಭಾಧ್ಯಕ್ಷಣಿಯವರೆ, ಮಾನ್ಯ ಮುಖ್ಯ ಮಂತ್ರಿಯವರು ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ನಾಳೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದರೆ ಈ ಬಗ್ಗೆ ತೀರ್ಮಾನ ಮಾಡುವುದಕ್ಕೆ ಸರ್ವ ಅಧಿಕಾರ ಈ ಸಭೆಗೆ ಇದೆ. ಆದರೆ ಬಹುಶಃ ಇವರು ಹೇಳುವ ಧಾಟಿಯನ್ನು ನೋಡಿದಾಗ ಇದನ್ನು ಒಪ್ಪುವುದಕ್ಕಾಗುವುದಿಲ್ಲ. To what extent he is prepared to take the co-operation of the Opposition. I cannot understand. I cannot understand the way in which he spoak. ಬಹುಶಃ ತಾವು ಪ್ರಜಾಪ್ರಭುತ್ವದ ಮೇಲೆ ದೊಡ್ಡ ಭಾಷಣವನ್ನು ಮಾಡಿದ್ದೀರಿ. ತಾವು ಈ ಸಭೆಯನ್ನು ಒಂದು ದಿವಸ ಮುಂದುವರೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಾದರೆ ನಾನು ಅದನ್ನು ಒಪ್ಪುವುದಿಲ್ಲ. We can also say that he is arguing for their own advantage, if he were to say that the opposition is arguing for its advantage. ಬಹುಶಃ ನಿಮಗೆಲ್ಲರಿಗೂ ಗೊತ್ತಿದೆ. ಯಾರೂ ನೋ ಕಾನ್ಫಿಡೆನ್ಸ್ ಮೋಷನ್‌ನ್ನು ಒಂದು ದಿವಸದಲ್ಲಿ ಸದನದಲ್ಲಿ ತೀರ್ಮಾನ ಮಾಡಿಲ್ಲ. ಇಂತಹ ಮಹತ್ತರವಾದ ಗಹನವಾದ ವಿಚಾರವನ್ನು ನಾವು ಕೂಲಂಕಷವಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ ಈ ಸದನದ ೩೦ ವರ್ಷಗಳಲ್ಲಿ ಈ ತರಹದ ಚರ್ಚೆಗಳು ೩-೪ ದಿವಸಗಳವರೆಗೆ ಚರ್ಚೆಯಾಗಿವೆ. ಇವತ್ತು ವಿಧಾನಸಭೆಯನ್ನು ಮುಂದುವರೆಸುವುದಕ್ಕೆ ನೀವೇ ದಿಟ್ಟತನದಿಂದ ವಿರೋಧಿಸುತ್ತಿರುವಿರಿ. ತಾವು ಜನ ತಂತ್ರದಲ್ಲಿ ಹೆಚ್ಚು ವಿಶ್ವಾಸವನ್ನು ಇಟ್ಟುಕೊಂಡಿರುವವರು ಮಾಜೀ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬಂದಿರತಕ್ಕ ವ್ಯಕ್ತಿಗಳು ನೀವು ಈಗ ನೀವು ವಿರೋಧ ಪಕ್ಷದವರು ತಂದಿರುವ ನೋ ಕಾನ್ಫಿಡೆನ್ಸ್ ಮೋಷನ್ ಮೇಲೆ ಚರ್ಚೆ ನಡೆಸುವುದಕ್ಕೆ ತಯಾರಿಲ್ಲ ಎನ್ನುವುದು ಸರಿಯೋ ?

ಶ್ರೀ ಡಿ. ದೇವರಾಜ ಅರಸ್. ದಯಮಾಡಿ ಕ್ಷಮಿಸಬೇಕು. ಎಷ್ಟೋ ಸಾರಿ ಅನೇಕ ಸಂದರ್ಭಗಳಲ್ಲಿ ಮಧ್ಯಸ್ಥಿಕೆ ಮಾಡಿದ್ದೀರಿ. ಆದರೆ ಈ ಮಧ್ಯಸ್ಥಿಕೆ ಆಗುವುದಿಲ್ಲ. ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ.

* ಶ್ರೀ ಎಸ್. ಬಂಗಾರಪ್ಪ. ಮಾನ್ಯ ಅಧ್ಯಕ್ಷಣಿಯವರೆ, ಅವಿಶ್ವಾಸ ನಿರ್ಣಯಕ್ಕೆ ನಾವು ಎಷ್ಟೋ ಸಾರಿ ಅನೇಕ ದಿವಸಗಳನ್ನು ತೆಗೆದುಕೊಂಡಿರತಕ್ಕ ಕೆಲವು ಸಂದರ್ಭಗಳನ್ನು ಇವತ್ತಿನ ದಿವಸ ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಲೋಕಸಭೆಯಲ್ಲಿ ನಡೆದಿರತಕ್ಕ ಸಂದರ್ಭವನ್ನು ಪ್ರಸ್ತಾಪ ಮಾಡಿದ್ದೀರಿ. ಲೋಕಸಭೆಯಲ್ಲಿ ನಿಯಮಾವಳಿಗಳು ಏನು ಇದ್ದವೊ ಅದನ್ನು ನೋಡಿದರೆ ನಿಮಗೆ ಗೊತ್ತಾಗುತ್ತದೆ ನಮ್ಮ ನಿಯಮಾವಳಿಯ ಪ್ರಕಾರ ೧೫೩ ಕ್ಲಾಸ್ ಏರಲ್ಲಿ ನೆಕ್ಸ್ಟ್ ಡೇ ಎಂದು ಏನು ಇದೆ ಅದು ಲೋಕಸಭೆಯ ನಡುವಳಿಕೆಗಳಲ್ಲಿ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ರೂಲಿಂಗ್ ಕ್ಲಾಸ್ ೩ ಓದಿ ಸ್ವಾಮಿ.

ಶ್ರೀ ಎಸ್. ಬಂಗಾರಪ್ಪ —The Speaker after considering the state of business in the Assembly allot a day or days.....ಎಂದಿದೆ.

ಶ್ರೀ ಕೆ. ಎಚ್. ರಂಗನಾಥ್.—ಕೌಲ್ ಅಂಡ್ ಶೆಕ್ದರ್ ಏನು ಹೇಳಿದ್ದಾರೆ ಅದನ್ನು ನೋಡಿ

ಶ್ರೀ ಎಸ್. ಬಂಗಾರಪ್ಪ.—ಕೌಲ್ ಅಂಡ್ ಶೆಕ್ದರ್‌ರವರು ನಮ್ಮ ಕರ್ನಾಟಕ ರಾಜ್ಯದ ಶಾಸನ ಸಭೆಯ ನಡವಳಿಕೆಯನ್ನು ಕುರಿತು ಕಾಮೆಂಟ್ ಮಾಡಿಲ್ಲ. ಒಂದು ಜನ್ರಲ್ ಪ್ರಿನಿ ಪಲ್ ತೆಗೆದುಕೊಂಡು ಮಾಡಿರುತ್ತಾರೆ. ಉದಾಹರಣೆಗೆ ಲೋಕಸಭೆಯಲ್ಲಿ ೧೯೮ ಕ್ಲಾಸ್‌ಗಳು ಇವೆ. ಅವನ್ನೆಲ್ಲಾ ತೆಗೆದುಕೊಂಡು ಮಾಡಿರಬಹುದು. ಮಾನ್ಯ ಲಕ್ಷ್ಮೀಸಾಗರ್ ಅವರು ಕಾನೂನಿನ ವಿಷಯವನ್ನು ಸ್ಪಷ್ಟವಾಗಿ ಹೇಳಿದರು. ಈ ಸಭೆನಿಯಮಾವಳಿಗೆ, ನಡತೆಗೆ ಸಂಬಂಧಪಟ್ಟ ಹಾಗೆ ಸಿದ್ಧಮಾಡಿಕೊಂಡಿರುತ್ತದೆ. Only those rules govern our business in the House ಎನ್ನತಕ್ಕಂಥಹ 'ನೆಕ್ಸ್ಟ್ಸ್ ಡೆ' ಎನ್ನತಕ್ಕ ಪದ ಇಲ್ಲದಿದ್ದರೆ ಮಾನ್ಯ ಸಂಸದೀಯ ಸಚಿವರು ಹೇಳಿದ್ದನ್ನು ಒಪ್ಪುತ್ತೇವೆ. ಈ ಪದ ರೂಲಿಂಗ್ ಕ್ಲಾಸ್ ೨ರಲ್ಲಿ ಇರುವುದರಿಂದ ಮೊದಲನೆಯದಾಗಿ ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ತಾವು ಈ ದಿವಸ ಕಾರ್ಯಕಲಾಪಗಳನ್ನು ನೋ ಕಾನ್ಫಿಡೆನ್ಸ್ ಮೋಷನ್‌ಗೆ ಸಂಬಂಧಪಟ್ಟ ಹಾಗೆ ನಿಗದಿ ಮಾಡತಕ್ಕ ಹಕ್ಕು ನಮಗೆ ಇಲ್ಲಾ ಎಂಬುದು ಸ್ಪಷ್ಟಪಡಿಸುತ್ತದೆ. ಇದರಿಂದ ನಿಯಮಾವಳಿಗೆ ವಿರುದ್ಧವಾದ ಒಂದು ತೀರ್ಮಾನವನ್ನು, ಸಂಪ್ರದಾಯವನ್ನು ಹಾಕಿದ ಹಾಗಾಗುತ್ತದೆ. ನಾಳೆ ಮತ್ತೊಂದು ಬರಬಹುದು. ದಯಮಾಡಿ, ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ನಮ್ಮ ನಿಯಮಾವಳಿಯ ವಿರುದ್ಧ ಹೋಗದ ಹಾಗೆ ನಾವು ಒಂದು ಸತ್‌ಸಂಪ್ರದಾಯವನ್ನು ಹಾಕುವುದು ಒಳ್ಳೆಯದೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ಅವರು ಓದಿದರು. ಅದು ಇದಕ್ಕೆ ಬರುವುದಿಲ್ಲ. ಏಕೆಂದರೆ ಚಾಪ್ಟರ್ ೧೭ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದರಲ್ಲಿ ಅನೇಕ ನಿರ್ಣಯಗಳು ಬರುತ್ತವೆ. ಅವು ಒಂದೊಂದು ರೂಪದಲ್ಲಿ ಬರುತ್ತವೆ. ಆ ಒಂದು ವ್ಯಾಖ್ಯಾನಕ್ಕೆ ನಾವು ಹೋಗುವ ಹಾಗಿಲ್ಲ. ಅವಕ್ಕೂ ಇದಕ್ಕೂ ಅನ್ವಯವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಬೇರೆ ಮತ್ತೊಂದು ಕೆಲಸ ಇರಬಹುದು. ನಿಳುವಳಿ ಸೂಚನೆ ಬಗ್ಗೆ ಶ್ರೀಮಾನ್ ದೇವೇಗೌಡರು ಸ್ಪಷ್ಟವಾಗಿ ತಿಳಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಧಾಟಿಯನ್ನು ನೋಡಿದರೆ ಅಧ್ಯಕ್ಷರು ಹೇಳುವುದನ್ನು ಇವರು ಹೇಳಿದ್ದಾರೆ ಎನ್ನುವ ಭಾವನೆ ಬರುತ್ತದೆ. ದಯಮಾಡಿ ಈ ಸದನದಲ್ಲಿ ಅದು ಬೇಡ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇದಕ್ಕೆ ಒಪ್ಪಿಕೊಳ್ಳಬೇಕು. ಇದಕ್ಕೆ ಎಷ್ಟು ಕಾಲ ನಿಗಧಿ ಮಾಡಬೇಕು ಎನ್ನುವುದನ್ನು ಈ ದಿನ ಬಿಟ್ಟು, ನಾಳೆಯೋ, ನಾಳಿದ್ದೋ, ಆಚೆ ನಾಳಿದ್ದೋ ಎಷ್ಟು ದಿನಗಳ ಕಾಲ ಬೇಕಾಗುವುದೆಂಬುದನ್ನು ತಿಳಿಸಬೇಕು. ಆದುದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ, ನಿಯಮಾವಳಿಗೆ ವಿರುದ್ಧವಾಗಿ ಕಠಿಣ ನಿಲುವನ್ನು ತಾಳುವುದು ಅಷ್ಟು ಒಳ್ಳೆಯದಲ್ಲ ಎನ್ನುವ ಭಾವನೆಯಿಂದ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಲೋಕಸಭಾ ನಡವಳಿಕೆಯನ್ನು ಏನು ಕೋಟ್‌ಮಾಡಿ ಪ್ರಸ್ತಾಪ ಮಾಡಿದ್ದಾರೆ ಅದು ನಮ್ಮ ನಿಯಮಾವಳಿಗೆ ಬರುವುದಿಲ್ಲ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಮಾನ್ಯ ಶಾಮಣ್ಣನವರಿಗೆ ಒಂದು ಮಾತನ್ನು ಹೇಳಬೇಕು. ಏಕೆಂದರೆ, ಮಾನ್ಯ ಶಾಮಣ್ಣನವರು ನಾನು ಮತ್ತು ಗುಂಡೂರಾಯರು ಆ ಕಡೆ ಮಂತ್ರಿಗಳಾಗಿದ್ದಾಗ ಅನೇಕ ಮಹಾಪರಾಧಗಳನ್ನು ಮಾಡಿಬಿಟ್ಟಿದ್ದೇವೆ ಎಂದು ಮಾತನಾಡುತ್ತಿದ್ದರು ಅವಿಶ್ವಾಸ ನಿರ್ಣಯ ಚರ್ಚೆಗೆ ಬರಲಿ. ಮಾನ್ಯ ಶಾಮಣ್ಣನವರು ನಮ್ಮ ಭಾಷಣವನ್ನು ಎವೆ ಇಕ್ಕದೆ, ಎಚ್ಚರ ತಪ್ಪದೆ ಕೇಳಲಿ. ಇದರ ಬಗ್ಗೆ ನಾನು ಮತ್ತು ಗುಂಡೂರಾಯರು ಹೇಳತಕ್ಕಂಥ ಶಕ್ತಿಯನ್ನು ಪಡೆದಿದ್ದೇವೆ. ನನ್ನ ಮಟ್ಟಿಗೆ ಹೆಳುವುದಾದರೆ, ಕಡಿಮೆ ಕಾಲ ಮಂತ್ರಿಯಾಗಿದ್ದೆ. ಅವಿಶ್ವಾಸ ನಿರ್ಣಯ ಪ್ರಸ್ತಾಪ ಆಗತಕ್ಕಂಥಾ ಕಾಲದಲ್ಲಿ ಎಲ್ಲಾ ವಿಷಯಗಳನ್ನೂ ಹೇಳುವವರಿದ್ದೇವೆ. ಅದನ್ನು ಮಾನ್ಯ ಶಾಮಣ್ಣನವರು ಗಣನೆಗೆ ತೆಗೆದುಕೊಳ್ಳಬೇಕು. ಎವಿಡೆನ್ಸ್ ಕೊಡದೆ ಜಡ್ಜ್‌ಮೆಂಟ್ ಕೊಡುವುದಕ್ಕೆ ಹೋಗಬಾರದು. ತಾವು ಇದನ್ನು ಚರ್ಚೆ ಮಾಡುವುದಕ್ಕೆ ಪ್ರತ್ಯೇಕ ಕಾಲವನ್ನು ನಿಗದಿ ಮಾಡುತ್ತೀರಿ ಎಂದು ಸಂಪೂರ್ಣವಾದ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.— ಮಾನ್ಯ ಉಪಾಧ್ಯಕ್ಷರೇ, ಮೊನ್ನೆಯ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿ ಇವತ್ತು ಮುಕ್ತಾಯ ಮಾಡಬೇಕು ಎಂದು ತೀರ್ಮಾನ ಮಾಡಿದೆ. ಅದನ್ನು ಈ ಸಭೆಯ ಮುಂದಿಟ್ಟಿದೆ ಸಭೆ ಒಪ್ಪಿಕೊಂಡಮೇಲೆ ಅದಕ್ಕೆ ನಾವೆಲ್ಲರೂ ಭಾಗಿಗಳು, ಅದರ ಪ್ರಕಾರ ಇವತ್ತು ಕೊನೇ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರವೇ ಇವತ್ತು ಸೇರಿರತಕ್ಕಂಥಾದ್ದು. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರ ತೀರ್ಮಾನಕ್ಕೆ ಬಿಟ್ಟಿರತಕ್ಕಂಥಾದ್ದು, ಈ ಒಂದು ನಿರ್ಣಯವನ್ನು ಏನು ತಂದಿದ್ದಾರೆ, ಅದು ಅವರಿಗೆ ಬಹಳ ಗಹನವಾಗಿದೆ ತರಲೇಬೇಕು ಎಂದು ತೀರ್ಮಾನ ಮಾಡಿ ತೆಗೆದು ಕೊಂಡು ಬಂದಿದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನವನ್ನು ಸಭೆ ಒಪ್ಪಿದ ಮೇಲೆ ಅದರ ಪ್ರಕಾರ ನಡೆದುಕೊಳ್ಳತಕ್ಕಂಥಾದ್ದು ನಮ್ಮ ಒಂದು ಜವಾಬ್ದಾರಿ. ಮತ್ತೆ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಪುನಃ ಬಿಸಿನೆಸ್ ಅಡ್ವೈಸರಿ ಕಮಿಟಿ ಮುಂದೆ ಹೋದರೂ ಕೂಡ ಈ ಸಭೆ ಅದನ್ನು ಒಪ್ಪ ಬೇಕಾಗುತ್ತೆದೆ. ಇಂಥಾ ಒಂದು ಪರಿಸ್ಥಿತಿ ಬಂದಾಗ ಅದರ ತೀವ್ರತೆಯನ್ನು ಗಮನಿಸಿ, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕಂಥ ಅಧಿಕಾರ ತಮಗೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ತಂದಿರುವಂಥ ನಿರ್ಣಯ ಏನಿದೆ ಅದು ಸರ್ಕಾರವನ್ನು ಸೆನ್ಸಾರ್ ಮಾಡತಕ್ಕಂಥ ನಿರ್ಣಯ. ಇದರಲ್ಲಿ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥ ಪೂರ್ಣ ಅಧಿಕಾರ ಇದೆ. ಹಾಗಿರುವಾಗ ತಮ್ಮ ಮುಂದೆ ಏನೇನು ವಿಷಯಗಳಿವೆ ಅದನ್ನೆಲ್ಲಾ ಪ್ರಸ್ತಾಪ ಮಾಡಲಿಕ್ಕೆ ಈ ಒಂದು ನಿರ್ಣಯ ಅವರಿಗೆ ಅವಕಾಶ ಕೊಡುತ್ತದೆ. ಅದಕ್ಕೆ ತಮ್ಮ ಆಪ್ಪಣೆಯನ್ನು ಕೇಳಿದ್ದಾರೆ. ತಮಗೆ ಅಧಿಕಾರ ಕೂಡ ಇದೆ. ರೂಲ್ ೧೫೩ಸಿ ಸಬ್‌ಕ್ಲಾಸ್ ೨ರಲ್ಲಿ ಇರುವ ಪ್ರಕಾರ ಲೀವ್ ೩ರ ಜನರ ಅನುಮತಿ ಇದೆ. ಸಭೆಯ ಅನುಮತಿ ಅದಕ್ಕೆ ಇವೆ, ನಾನು ಅನುಮತಿ ಕೊಟ್ಟಿದ್ದೇನೆ ಎಂದು ಹೇಳಿದರೆ ನಾವು ಯಾವಾಗ ತೆಗೆದುಕೊಳ್ಳಬಹುದು ಎಂದು ಹೇಳಬಹುದು. ಈ ನಿರ್ಣಯ ಏನಿದೆ ಅದು ಬಹಳ ಗಹನವಾದ ವಿವಾದ ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಹೆಚ್ಚು ಕಾಲ ಮಾತನಾಡತಕ್ಕಂಥ ಪ್ರಮೇಯ ಒದಗಿ ಬರಬಹುದು. ಅದನ್ನೆಲ್ಲಾ ನಿರ್ಣಯ ಮಾಡತಕ್ಕಂಥಾವರು ತಾವಿದ್ದೀರಿ. ನಾಳೆ ತೆಗೆದುಕೊಳ್ಳಬೇಕು ಎಂದು ವಾದ ಮಾಡುವುದಕ್ಕೆ ಬದಲಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಒಂದು ನಿರ್ಣಯವನ್ನು ಮಂಡಿಸಿ ಸಿದ್ದಾರೆ ಅದನ್ನು ಇವತ್ತೇ ಪ್ರಸ್ತಾಪ ಮಾಡಿದರೆ ಕಾಲವನ್ನು ಉಳಿ ಕೊಂಡು ಹೋಗಲಿಕ್ಕೆ ಅನುಕೂಲ ವಾಗುತ್ತದೆ. ಮತ್ತು ಅವರ ತೀವ್ರತೆ ಏನಿದೆ ಸರ್ಕಾರವನ್ನು ಖಂಡಿಸತಕ್ಕಂಥಾದ್ದು, ಸರ್ಕಾರದ ಗಮನಕ್ಕೆ ತರತಕ್ಕಂಥಾದ್ದು, ಸರ್ಕಾರದ ಲೋಪದೋಷಗಳನ್ನು ಎತ್ತಿಹಿಡಿಯತಕ್ಕಂಥಾ ವಿಚಾರಗಳು ದರಲ್ಲಿ ಏನಿಅದೆ ಅದನ್ನು ಪ್ರಸ್ತಾಪ ಮಾಡು ವುದಕ್ಕೆ ಅನುಕೂಲವಾದಹಾಗೆ ಆಗುತ್ತದೆ. ದಯಮಾಡಿ ತಾವು ಅದಕ್ಕೆ ಅನುವು ಮಾಡಿಕೊಡಬೇಕು, ಸಬ್‌ಕ್ಲಾಸ್–೩ರ ಪ್ರಕಾರ ತಮಗೆ ಅನೇಕವಾದ ಅವಕಾಶ ಏದೆ. "If leave is granted under sub-rule (2), the Speaker may after considering the state of business in the Assembly allot a day or part of a day for the discussion of the motion" ಇವತ್ತಿನ ಕಾರ್ಯಕ್ರಮ ಏನಿದೆ ಅದನ್ನು ನೋಡಿ, ಅದರಲ್ಲಿ ಈ ಅಂಶ ಬರುವುದಾದರೆ ಅದನ್ನು ನೋಡಿ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥಾದ್ದು ತಮಗೆ ಬಿಟ್ಟಿರತಕ್ಕಂಥಾದ್ದು. ಆದುದರಿಂದ ದಯಮಾಡಿ ಈ ಒಂದು ನಿರ್ಣಯವನ್ನು ತತ್‌ಕ್ಷಣವೇ ತೆಗೆದುಕೊಳ್ಳುವುದಕ್ಕೆ ತಾವು ಆಪ್ಪಣೆಯನ್ನು ಕೊಡಬೇಕು. ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಉಪಾಧ್ಯಕ್ಷರೇ, ಬಿಸಿನೆಸ್ ಅಡ್ವೈಸರಿ ಕಮಿಟಿ ಮೊನ್ನೆ ತೀರ್ಮಾನ ಮಾಡಿದ ಬಗ್ಗೆ ಮಾನ್ಯ ಸಂಸದೀಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚು ಭಾರ ಹಾಕುತ್ತಾ ಇದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಏನು ಸೂಚನೆ ಮಾಡುತ್ತದೆ ಅದನ್ನು ಅಂತಿಮವಾಗಿ ಒಪ್ಪಿಕೊಳ್ಳಬೇಕು ಎನ್ನುವುದು ನಮಗೆ ಗೊತ್ತಿದೆ. ಅವರಿಗೂ, ನಮಗೂ ಮತ್ತು ತಮಗೂ ಗೊತ್ತಿರುವ ಹಾಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಮಾಡತಕ್ಕಂಥ ಕಾಲವನ್ನು ಎಷ್ಟೋ ಸಾರಿ ನಾವು ಪುನಃ ಬದಲಾವಣೆ ಮಾಡಿಲ್ಲವೇ ? ಇದರ ಬಗ್ಗೆ ಏಕೆ ಇಷ್ಟೊಂದು.....

ಶ್ರೀ ಕೆ. ಎಚ್. ರಂಗನಾಥ್.— ತಾವು ಈ ನಿರ್ಣಯವನ್ನು ತರುವಾಗ, ಎಲ್ಲಾ ವಿಚಾರವನ್ನು ಹೇಳುವುದಕ್ಕೆ ಹಿಂದೆ ಮುಂದೆ ನೋಡುತ್ತಾ ಇದ್ದೀರಿ. ನಾಳೆ ಏಕೆ ತೆಗೆದುಕೊಳ್ಳಬೇಕು. ಈಗಲೇ ತೆಗೆದುಕೊಳ್ಳೋಣ.

ಶ್ರೀ ಎಚ್. ಡಿ. ದೇವೇಗೌಡ.—ಹೆದರಿಕೊಂಡು ಕೂತುಕೊಂಡು, ಅವಿಶ್ವಾಸ ನಿರ್ಣಯವನ್ನು ಎದುರಿಸುವುದಕ್ಕೆ ತಮಗೆ ಶಕ್ತಿ ಇಲ್ಲ ಎಂದು ನಾನು ಆರ್ಗ್ಯೂ ಮಾಡುತ್ತಾ ಇಲ್ಲ. ಚರ್ಚೆ ನಡೆಯಬೇಕಾದರೆ ಒಂದೇ ದಿವಸದಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ. ಇವತ್ತೇ ಮುಗಿಯಬೇಕು, ನಾಳೆ ಕೊಡುವುದಿಲ್ಲ ಎಂದು ಹೇಳುವಷ್ಟು ದೂರ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಹೋಗಲಾರರು ಎಂದು ನಾನು ಭಾವಿಸುತ್ತೇನೆ. ಹಿಂದೆ ಹತ್ತಾರು ನೋ ಕಾನ್‌ಫಿಡೆನ್ಸ್ ಮೋಷನ್‌ಗಳು ಮೂವ್ ಆದಾಗ ಮೂರು ನಾಲ್ಕು ಗಂಟೆಗಳಲ್ಲಿ ಮುಗಿದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳುವ ಧಾಟಿಯಲ್ಲಿ ಇವತ್ತೇ ಮುಗಿಸುವುದಕ್ಕೆ ಸಾಧ್ಯವೇ ? ಮಾನ್ಯ ಮುಖ್ಯ ಮಂತ್ರಿಗಳಿಗೇ ಉತ್ತರ ಕೊಡುವುದಕ್ಕೆ ೩-೪ ಗಂಟೆಗಳು ಬೇಕಾಗಬಹುದು. ಏಕೆಂದರೆ, ೭ ವರ್ಷಗಳಿಂದ ಮುಖ್ಯ ಮಂತ್ರಿಗಳು ಭಾಷಣ ಮಾಡಿರುವುದನ್ನು ನೋಡಿದರೆ ಯಾವತ್ತೂ ೨ ಗಂಟೆ ೩ ಗಂಟೆಗೆ ಕಡಿಮೆ ಭಾಷಣ ಮಾಡಿಲ್ಲ. ಆದರೆ ಇವತ್ತು ಅವರ ಆನಾರೋಗ್ಯದ ನಿಮಿತ್ತ ಕಡಿಮೆ ಮಾತನಾಡುತ್ತಾರೋ ಗೊತ್ತಿಲ್ಲ. ಆದುದರಿಂದ ಸಾಕಷ್ಟು ಚರ್ಚೆ ಆಗಲಿಕ್ಕೆ ಅವಕಾಶ ಬೇಕಾಗುತ್ತದೆ. ಕಾಲವನ್ನು ಗೊತ್ತು ಮಾಡುವುದಕ್ಕೆ ಸದನದಲ್ಲಿ ತಿಕ್ಕಾಟ ಬೇಕಾಗಿಲ್ಲ. ಅದಕ್ಕೆ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆಯಬೇಕಾಗುತ್ತದೆ. ಅಲ್ಲಿ ಕೂತು ತೀರ್ಮಾನ ಮಾಡಬೇಕೇ ಹೊರತು ನೀವು ಈ ಸದನದಲ್ಲಿ ತೀರ್ಮಾನ ಮಾಡುವುದಾದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ರದ್ದುಮಾಡ ಬೇಕಾಗುತ್ತದೆ. ಇಲ್ಲೇ ಕೂತು ಎಲ್ಲಾ ವಿಷಯಗಳನ್ನು ತೀರ್ಮಾನ ಮಾಡುವುದಾದರೆ ಕೆಟ್ಟ ಸಂಪ್ರದಾಯ ಹಾಕಿದ ಹಾಗೆ ಆಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನೆಲ್ಲಾ ಕೇಳಿದ್ದೇನೆ. ಕಳೆದ ೨-೩ ದಿವಸ ಸುಮ್ಮನೆ ಇದ್ದು ಇವತ್ತು ಏಕೆ ಈ ನಿರ್ಣಯ ತಂದರೋ ಗೊತ್ತಾಗಿಲ್ಲ.

SRI GOVIND P. VADEYARAJ.—It is the privilege of the Opposition to bring any motion. The Chief Minister cannot come in our way.

SRI D. DEVARAJ URS.—I agree with the hon'ble member hundred percent that it is the privilege of the opposition to bring any motion at any time they want. At the same time.....

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ೪ ದಿವಸ ಅಧಿವೇಶನ ಎಂದು ಏಕೆ ಕರೆದಿರಿ.

ಶ್ರೀ ಡಿ. ದೇವರಾಜ ಅರಸ್.—ಅದು ಬೇರೆ ವಿಚಾರ.

SRI S R. BOMMAI.—Only four-day session. Normally three-weeks or four weeks session are called.

ಶ್ರೀ ಡಿ. ದೇವರಾಜ ಅರಸ್.—೪ ದಿವಸ ಅಧಿವೇಶನ ಕರೆದಿದ್ದೆವು, ಅದು ಆದ ನಂತರ ಇವತ್ತು ೫ನೇ ದಿವಸಕ್ಕೆ ಎಕ್ಸ್‌ಟೆಂಡ್ ಮಾಡಿದ್ದೇವೆ. ತಾವೂ ಕೂಡ ಪತ್ರಿಕೆಯಲ್ಲಿ ಹೇಳಿಕೆ ಬೇರೆ ಕೊಟ್ಟಿದ್ದೀರಿ, ನಿಮ್ಮ ಹೇಳಿಕೆ ಅಧಿವೇಶನ ಬೇಗ ಕರೆಯುವುದಕ್ಕೆ ಸಹಾಯವಾಯಿತು.

SRI S. R BOMMAI.—Never in the history of the Karnataka Assembly a four-day session was called.

ಶ್ರೀ ಡಿ. ದೇವರಾಜ ಅರಸ್.—ಕಾರ್ಯಕಲಾಪಗಳು ನಡೆಯುವುದಕ್ಕೆ ಎಷ್ಟು ಬೇಕೋ...

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮಗೆ ಏಕೆ ಹೆದರಿಕೆ ಅಂತ.

ಶ್ರೀ ಡಿ. ದೇವರಾಜ ಅರಸ್.—ಹೆದರಿಕೆ ಪ್ರಶ್ನೆಯಲ್ಲ. ಅದು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರಿ. ಸುಮ್ಮನೆ ಇದರ ಮೇಲೆ ಕಾಲವನ್ನು ಕಳೆಯುತ್ತಾ ಇದ್ದಾರೆ. Under rule 322, I want to move a motion to suspend the rules and take up this motion, even if it is otherwise.

SRI S.R. BOMMAI—The Hon. Chief Minister has moved a motion under Rule 322. The rule reads thus :

"Any member may, with the consent of the Speaker, move that any rule may be suspended in its application to a particular motion before the Assembly and if the motion is carried the rule in question shall be suspended for the time being".

Before moving the motion the consent of the Speaker is necessary. The Hon'ble Chief Minister did not take the consent. He does not know the powers of the Hon'ble Speaker. He should first take the consent of the Hon'ble Speaker and it is for the Hon'ble Speaker to judiciously consider under given circumstances whether the consent should be given or not. Without going through the formalities, this has been raised. I would like to suggest that the House should be adjourned for 15 minutes since there is some confusion over this matter. We can sit and solve the problem. ನನಗೆ ಗೊತ್ತಿದ್ದ ಹಾಗೆ ಯಾವುದೇ ಮುಖ್ಯ ಮಂತ್ರಿಯಾಗಲೀ, ಯಾವುದೇ ಪ್ರಧಾನ ಮಂತ್ರಿಯವರಾಗಲೀ, ಅಥವಾ ಯಾವುದೇ ಸರ್ಕಾರವಾಗಲಿ ಒಂದೇ ದಿವಸದಲ್ಲಿ ಇಂಥಾ ನಿಲುವಳಿ ಸೂಚನೆಯ ನಿರ್ಣಯವಾಗ ಬೇಕೆಂದು ಹೇಳಿಲ್ಲ. ಇದಕ್ಕೆ ೨-೩ ದಿವಸ ಬೇಕಾಗುತ್ತದೆ, ೨-೩ ದಿವಸದೊಳಗೆ ಚರ್ಚೆ ಮಾಡುವುದ ಕ್ಕಾಗುವುದಿಲ್ಲ. ಹಾಗೆ ಮಾಡಿದರೆ ಈ ಕಡೆಯ ಸದಸ್ಯರ ಹಕ್ಕನ್ನು ಮೊಟಕು ಮಾಡಿದ ಹಾಗೆ ಆಗು ತ್ತದೆ. ಆದುದರಿಂದ ಒಂದು ೧೫ ನಿಮಿಷ ಅಡ್ಜರ್ನ್ ಮಾಡಿ ಆ ಮೇಲೆ ಒಂದು ನಿರ್ಣಯಕ್ಕೆ ಬರೋಣ.

SRI HARNAHALLI RAMASWAMY—There is a motion tabled by the Hon. Chief Minister. He has not taken the consent but simply moved it for suspending the rules. The Speaker has to fix a day for debating the no Confidence motion. The opinion of the House will have to be taken in this regard. Only after obtaining the opinion or consent of the House, further procedure will follow. I request the Hon'ble Deputy Speaker to take the sence of the House.

† ಶ್ರೀ ಎಂ. ವಿ. ರಾಜಶೇಖರನ್ (ಉತ್ತರಹಳ್ಳಿ)—ಈಗ ವಿರೋಧ ಪಕ್ಷದವರು ಈ ಒಂದು ಅವಿ ಶ್ವಾಸ ನಿರ್ಣಯವನ್ನು ಈಗಾಗಲೇ ಮಂಡಿಸಿದ್ದಾರೆ, ಅದಕ್ಕೆ ಮುಖ್ಯ ಮಂತ್ರಿಗಳವರು ಒಪ್ಪಿಕೊಂಡಿ ದ್ದಾರೆ. ಇದರಲ್ಲಿ ಆತುರ ಏತಕ್ಕೆ ? ಎಂಬುದೇ ಗೊತ್ತಾಗುತ್ತಿಲ್ಲ. ಏತಕ್ಕೆಂದರೆ ನಿಜವಾಗಿಯೂ ಸಂಪೂರ್ಣವಾಗಿ ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡಬೇಕಾದರೆ ಆದಷ್ಟು ಈ ಸಭೆಯ ಸದಸ್ಯರು ಭಾಗವಹಿಸಬೇಕಾಗುತ್ತದೆ. ಅಂಥಾದ್ದರಲ್ಲಿ ಇಲ್ಲಸಲ್ಲದ ವಿಷಯಗಳನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದಾ ರೆಂಬುದು ಗೊತ್ತಾಗುತ್ತಿಲ್ಲ ಎರಡನೆಯದಾಗಿ ಅವರಿಗೆ ಇವತ್ತು ಸಾಕಷ್ಟು ಬಲವಿದೆ, ಅದರ ಬಗ್ಗೆ ಯಾರೂ ಇವತ್ತಿನ ದಿವಸ ಅದನ್ನು ಪ್ರಶ್ನೆ ಮಾಡುತ್ತಿಲ್ಲ. ಅದನ್ನು ಪೂರ್ಣವಾಗಿ ಉಪಯೋಗಿಸಿ ಕೊಂಡು ವಿರೋಧ ಪಕ್ಷದವರಿಗೆ ಒಂದು ಕಳಂಕ ತರಬೇಕೆಂದು ತಾವು ಅಭಿಪ್ರಾಯ ತಾಳುವುದಾದರೆ ಅದು ಒಂದು ಸಂತ್‌ಸಂಪ್ರದಾಯವಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ನನ್ನ ಮನವಿ ಏನೆಂದರೆ ಅದರ ಬಗ್ಗೆ ಸಾಕಷ್ಟು ಚರ್ಚೆ ಮಾಡಲು ಕಾಲಾವಕಾಶ ಕೊಡಿ ಸಾಕಷ್ಟು ಸದಸ್ಯರು ಮಾತನಾ ಡಲಿ, ಆದುದರಿಂದ ಈ ನಿರ್ಣಯವನ್ನು ಸಂಪೂರ್ಣ ಚರ್ಚೆಗೆ ತೆಗೆದುಕೊಳ್ಳತಕ್ಕದ್ದು ಒಳ್ಳೆಯದು. ಈಗ ನಮಗೆ ಉಳಿದಿರತಕ್ಕಂಥ ಕೇವಲ ೩-೪ ಗಂಟೆ ರಾತ್ರಿ ೧೦ ಗಂಟೆವರೆಗೆ ಕೂತರೆ ಇನ್ನೂ ೪-೫ ಗಂಟೆ ಹೆಚ್ಚಿಗೆ ಕೊಟ್ಟ ಹಾಗೆ ಆಗುವುದಿಲ್ಲವೇ ? ಏತಕ್ಕೆ ಅವಸರ ಮಾಡುತ್ತೀರಿ ? ತಮಗೆ ಸಾಕಷ್ಟು ರಾಷ್ಟ್ರ ಮಟ್ಟದಲ್ಲಿ ಕಾರ್ಯಗೌರವಗಳಿವೆ, ಅದಕ್ಕೆ ತಾವು ಗಮನಕೊಡಬೇಕಾಗಿದೆ ಅದನ್ನು ನಾವು ಒಪ್ಪಿಕೊಳ್ಳು

ತ್ತೇವೆ. ಆದರೆ ಸತ್‌ಸಂಪ್ರದಾಯಗಳನ್ನು ತಾವು ಪೊಟಕು ಮಾಡತಕ್ಕಂಥದ್ದು ಸರಿಯಲ್ಲ, ಸಾಕಷ್ಟು ಕಾಲಾವಕಾಶವನ್ನು ಕೊಡತಕ್ಕಂಥದ್ದು ಬಹಳ ಮುಖ್ಯ. ಮತ್ತೆ ಅಧ್ಯಕ್ಷಿಣಿಯವರೆ, ಮಾನ್ಯ ಹಾರನ ಹಳ್ಳಿ ರಾಮಸ್ವಾಮಿಯವರು ಏನು ಹೇಳಿದರು ಮಾನ್ಯ ಮುಖ್ಯ ಮಂತ್ರಿಯವರು ಮೂವ್ ಮಾಡಿದ ವಿಚಾರದಲ್ಲಿ ಇವತ್ತು ಆದರ ಬಗ್ಗೆ ನಾವು ಪ್ರೆಸ್ ಮಾಡಬೇಕಾದ್ದು ಇಲ್ಲ ಅದನ್ನು ಪ್ರಿಪ್ಪೀಜ್ ಇಶ್ಯೂ ಮಾಡಬೇಡಿ. ಹಾಗೆ ಮಾಡುವುದರಿಂದ ಶಾಂತವಾದ ವಾತಾವರಣವನ್ನು ಕಲಕಿದ ಹಾಗೆ ಆಗುತ್ತದೆ, ಆದುದರಿಂದ ತಮ್ಮ ಮುಖಾಂತರ ಮುಖ್ಯ ಮಂತ್ರಿಗಳವರಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡುವುದಕ್ಕೆ ಅವಕಾಶಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ,

3-30 P.M.

ಶ್ರೀ ಎಸ್ ಎಂ. ಶೀರ್ನಾಳಿ ಚಂದ್ರಶೇಖರ್—ಮಾನ್ಯ ಸಂಸದೀಯ ಸಚಿವರು ಕ್ಲಾಸ್ (೩)ನ್ನು ಓದಿದರು, Madam Speaker, even for suspension there is a specific rule. He has to move a motion and the Speaker has to give consent. With the consent of the Speaker, he has to bring a separate motion. Sri Ramaswamy has supported it. He has been a lawyer for the past twenty years. Please allow us to say whatever we want to say, because, it cannot be finished so early. Every one of us want to say something or the other. That takes some time. It becomes so undemocratic.

(At this stage, Sri Bhimanna S. Khandre stood up to speak)

MADAM DEPUTY SPEAKER – You cannot stand up like this and speak anything.

SRI BHEEMANNA S. KHANDRE—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಕ್ಲಾಸ್-೩ ಸಬ್ ರೂಲ್-೨ರ ಪ್ರಕಾರ ಮೊದಲು ತಾವು ದಿನವನ್ನು ಗೊತ್ತು ಮಾಡಿದ ನಂತರ ಚರ್ಚೆಯಾಗಬೇಕು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ೩ ದಿವಸ ನಾಗಲಿ ೪ ದಿವಸವಾಗಲಿ ಕುಳಿತು ಚರ್ಚೆ ಮಾಡೋಣ. ಜನರಿಗೆ ತೊಂದರೆ ಕೊಟ್ಟಾಗ, ಲಾ ಅಂಡ್ ಆರ್ಡರ್ ಕೊಟ್ಟಾಗ ಜನರು ಸರ್ಕಾರವನ್ನು ವಿರೋಧಿಸುತ್ತಾರೆ. ಇದಕ್ಕೆ ಏನು ಅನ್ನುವುದಿಲ್ಲ. I request the Hon. Speaker to give at least 3-4 days. A time of 3-4 days may be allotted.

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ರೂಲ್ ೩೨೨ರ (ಸಸ್‌ಪೆನ್‌ಷನ್ ಆಫ್ ರೂಲ್ಸ್) ಬಗ್ಗೆ ಪ್ರಸ್ತಾಪ ಮಾಡಿದರು. ಅದರಲ್ಲಿ ಏನು ಹೇಳುತ್ತಿದೆ ಅಂದರೆ, "Any member may, with the consent of the Speaker move that any rule may be suspended in its application to a particular motion before the Assembly and if the motion is carried the rule in question shall be suspended for the time being." ಈ ರೂಲ್ಸನ್ನು ಸಸ್ಪೆಂಡ್ ಮಾಡಬೇಕೆಂದು ಒಂದು ವೇಳೆ ನಿರ್ಣಯವನ್ನು ಈ ಸದನದ ಸದಸ್ಯರು ಯಾರಾದರೂ ತಂದರೆ ಅದಕ್ಕೆ ತಾವು ಒಪ್ಪಿಗೆ ಕೊಟ್ಟರೆ ಮಾತ್ರ ಮೂವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ತಾವು ಒಪ್ಪಿಗೆ ಕೊಟ್ಟರೆ ಏನಾಗುತ್ತದೆಂದರೆ ನಾವು ಚಾಪ್ಟರ್ ೧೭ರ ಪ್ರಕಾರ ಏನು ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟ ಹಾಗೆ ವಿಷಯವನ್ನು ಇಲ್ಲಿಯವರೆಗೆ ಚರ್ಚೆ ಮಾಡಿದ್ದೇವೆ ಆದಷ್ಟು ಕಿತ್ತುಕೊಂಡು ಹೋಗಲಿಕ್ಕೆ ಒಪ್ಪಿಗೆ ಕೊಟ್ಟಂತಾಗುತ್ತದೆ. ತಾವು ಒಪ್ಪಿಗೆ ಕೊಡದೆ ಇದ್ದರೆ ಚಾಪ್ಟರ್ ೧೭ ರಲ್ಲಿರತಕ್ಕ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಪಟ್ಟ ರೂಲ್ಸನ್ನು ಸಸ್ಪೆಂಡ್ ಮಾಡತಕ್ಕ ಅಧಿಕಾರ ಇಲ್ಲಿ ಯಾರಿಗೂ ಇಲ್ಲ. ಮೂವ್ ಮಾಡುವುದಕ್ಕೆ ಅವರಿಗೆ ಅವಕಾಶವೇ ಇಲ್ಲ, ಒಂದು ವೇಳೆ ಏನಾದರೂ ಅದಕ್ಕೆ ಆ ಕಡೆಯವರು ಪ್ರಯತ್ನ ಪಟ್ಟರೆ ಅದಕ್ಕೆ ತಾವು ದಯವಾಡಿ ಒಪ್ಪಿಗೆ ಕೊಡಬಾರದು.

ಶ್ರೀ ಡಿ. ದೇವರಾಜ ಅರಸ್—ಹೆದರಿಸಬೇಡಿ. ಕೊಡುವುದು ಬಿಡುವುದು ಅವರಿಗೆ ಬಿಟ್ಟದ್ದು.

ಶ್ರೀ ಎಸ್. ಬಂಗಾರಪ್ಪ—ದಯವಿಟ್ಟು ಎಂದು ಕೇಳಿಕೊಂಡರೆ ಹೆದರಿಸುವುದು ಎಂದು ಅರ್ಥವೇ? ತಮ್ಮ ವಾದವನ್ನು ನಂತರ ಮಂಡನೆ ಮಾಡಿ. ಒಂದು ವೇಳೆ ಆ ಪ್ರಯತ್ನವನ್ನು ಆ ಕಡೆಯವರೇನಾದರೂ ಮಾಡಿದರೆ ದಯಮಾಡಿ ತಾವು ಒಪ್ಪಿಗೆ ಕೊಡಬಾರದು. ಅದು ಕೆಟ್ಟ ಸಂಪ್ರದಾಯವನ್ನು ಹಾಕಿದಂತಾಗುತ್ತದೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತಿದ್ದೇನೆ.

(ಈ ಸಂದರ್ಭದಲ್ಲಿ ಮಾನ್ಯ ಖಂಡ್ರೆಯವರು ಮಾತನಾಡಲು ಎದ್ದು ನಿಲ್ಲಲು ಮಾನ್ಯ ಉಪ ಸಭಾಧ್ಯಕ್ಷಿಣಿಯವರು ಅವಕಾಶ ಕೊಡಲಿಲ್ಲ)

MADAM DEPUTY SPEAKER—Yesterday, I requested all the members to please behave themselves in the House. I have to specially point out that hon. member Sri Khandre has the habit of standing up and saying all sorts of things, without the permission of the Chair.

ಶ್ರೀ ಭೀಮಣ್ಣ ಖಂಡ್ರೆ —ನಾನು ಮಾತನಾಡಿದರೆ ಮಾತ್ರ ನಿಮಗೆ ಈ ರೀತಿ ಆಗುತ್ತದೆ, ಆದರೆ ಆ ಕಡೆಯವರು ಏನು ಮಾಡಿದರೂ ಸರಿ.

MADAM DEPUTY SPEAKER—When I sit here, I don't belong to any party. I am very impartial. Nobody can point a finger at me. You behave in a way that irritates every one. We cannot even understand what you are saying. I cannot tolerate it. I am hero to listen to the members who are giving some suggestions but when they stand up without my permission, I don't tolerate it. You please be careful when you speak. I appeal to the members to come to some understanding and avoid further discussion.

ಶ್ರೀ ಡಿ. ದೇವರಾಜ ಅರಸ್—ತಾವು ಏನು ಎರಡು ಕಡೆಯವರು ಒಪ್ಪಂದ ಮಾಡಿಕೊಂಡು ಬನ್ನಿ ಎಂದು ಮನವಿ ಮಾಡಿದ್ದೀರಿ ಅದಕ್ಕೆ ನಮ್ಮಿಂದ ಆಗುವುದು ಇಷ್ಟೆ. ಈಗ ಅವರೇ ಪ್ರಾರಂಭ ಮಾಡಲಿ. ನಾಳೆ ನಾನು ಇರುವುದಿಲ್ಲ ಮತ್ತು ಅನೇಕ ಜನರು ಇರುವುದಿಲ್ಲ. ಮುಂದುವರಿಯುವುದಾದರೆ ಬೆಳಿಗ್ಗೆ ಸೇರಿ ಮುಕ್ತಾಯ ಮಾಡೋಣ.

ಶ್ರೀ ಆರ್. ಗುಂಡೂರಾವ್-ಮಾನ್ಯ ಸಭಾ ನಾಯಕರು ಮತ್ತು ಮುಖ್ಯ ಮಂತ್ರಿಗಳು ನಾನು ಅವಿಶ್ವಾಸ ನಿರ್ಣಯವನ್ನು ಮಂಡಿಸಿದಾಗ ಇಲ್ಲಿ ಇರಲಿಲ್ಲ. ಮಾನ್ಯ ಉಪ ನಾಯಕರಾದ ರಂಗನಾಥ್‌ರವರು ಇದ್ದರು. ನಾನು ೧೫೩ನೇ ಕಾನೂನು ಪ್ರಕಾರ ನಿರ್ಣಯವನ್ನು ಮಂಡಿಸಿದ್ದೇನೆ. ತಾವು ಅದನ್ನು ಸ್ವೀಕರಿಸಿ ಕಾನೂನು ಪ್ರಕಾರ ನಮಗೆ ೩೦ ಜನರಿಗಿಂತ ಹೆಚ್ಚಿನ ಬೆಂಬಲ ಇರುವುದರಿಂದ ಚರ್ಚೆ ಮಾಡಬಹುದೆಂದು ಅನುವು ಮಾಡಿ ಕೊಟ್ಟಿರಿ. ಆಮೇಲೆ ಆ ಕಡೆಯಿಂದ ಮತ್ತು ಈ ಕಡೆಯಿಂದ ವಾದ ವಿವಾದಗಳು ನಡೆದವು. ಅವರು ಕೌಲ್ ಮತ್ತು ಶಕ್ದರ್ ಸಂಪ್ರದಾಯವನ್ನು ಓದಿದರು. ಮಾನ್ಯ ವೀರಪ್ಪ ಮೊಯಿಲಿಯವರು ಮತ್ತಿತರ ಸದಸ್ಯರು ಓದಿದರು. ಮಾನ್ಯ ರಂಗನಾಥ್‌ರವರು ವಕೀಲರು ಮತ್ತು ಮಾನ್ಯ ವೀರಪ್ಪ ಮೊಯಿಲಿಯವರು ವಕೀಲರು. ನಾನು ವಕೀಲನಲ್ಲ. ನಾನು ಮಂಡಿಸಿದಂತಹ ನಿರ್ಣಯವನ್ನು ಕಾನೂನಿಗೆ ಒಳಪಟ್ಟು ಮಂಡಿಸಿದ್ದೇನೆ. ಈ ಕರ್ನಾಟಕದ ವಿಧಾನಸಭೆಯ ಚರಿತ್ರೆಯಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ಈಗಲೇ ತೆಗೆದುಕೊಂಡು ಇವತ್ತೇ ಅದನ್ನು ಮುಗಿಸಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ ನಾನು ಇನ್ನೂ ೨ನೇ ಟರ್ಮಿನಲ್ಲಿ ಇರುವಂತಹ ಸದಸ್ಯ. ಈ ಸಭೆಯ ನಾಯಕರೂ ಆಗಿರುವ ಮಾನ್ಯ ಮುಖ್ಯಮಂತ್ರಿಗಳು ಈ ವಿಧಾನಸಭೆ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಸದಸ್ಯರಾಗಿದ್ದಾರೆ. ಆಯಾಯ ರಾಜ್ಯಗಳ ವಿಧಾನಸಭೆಗಳನ್ನು ಹೇಗೆ ನಡೆಸಬೇಕೆನ್ನುವುದರ ಬಗ್ಗೆ ಪ್ರತ್ಯೇಕವಾದ ನಿಯಮಗಳನ್ನು ಮಾಡಲಾಗಿದೆ. ಹಾಗೆಯೇ ಲೋಕ ಸಭೆಯನ್ನು ನಡೆಸುವುದಕ್ಕೂ ಪ್ರತ್ಯೇಕ ನಿಯಮಗಳನ್ನು ಮಾಡಲಾಗಿದೆ, ಮಾನ್ಯ ರಂಗನಾಥ್ ಅವರು ಅನೇಕ ಸಂದರ್ಭಗಳಲ್ಲಿ ನಿಯಮಗಳಿಗೆ ಬಹಳ ಬೆಲೆಯನ್ನು ಕೊಡುತ್ತಾರೆ. ಕಾನೂನು ಪ್ರಕಾರ ನಾವು ಕೆಲಸ ಮಾಡಬೇಕಾಗಿದೆ, ನಿಯಮಾನುಸಾರ ನಾವು ಹೋಗಬೇಕಾಗಿದೆ ಎಂದು

ಆಗಾಗ್ಗೆ ಹೇಳುತ್ತಿರುತ್ತಾರೆ. ನಿಯಮದ ಚೌಕಟ್ಟನ್ನು ಮೀರಿ ಕಲಾಪಗಳನ್ನು ನಡೆಸುವುದಕ್ಕೆ ಯಾವ ಸದಸ್ಯರಿಗೂ ಹಕ್ಕಿಲ್ಲ. ಹಾಗೊಂದು ವೇಳೆ ನಡೆಸಿದರೆ, ಅದು ಸಭೆಗೆ ಗೌರವ ತರುವಂತಹುದಲ್ಲ, ಸದಸ್ಯರಿಗೂ ಗೌರವ ತರುವಂತಹುದಲ್ಲವೆಂದು ಮೊನ್ನೆ ಕೂಡ ಹೇಳಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್—ಈಗಲೂ ಅಷ್ಟೆ.

ಶ್ರೀ ಆರ್: ಗುಂಡೂರಾವ್—ಅದನ್ನು ನಾನು ಒಪ್ಪುತ್ತೇನೆ. ತಾವೂ ಕೂಡ ವಿರೋಧ ಪಕ್ಷದಲ್ಲಿದ್ದಿರಿ, ಇಂದಿನ ಮುಖ್ಯ ಮಂತ್ರಿಗಳೂ ಸಹ ೧೯೬೯-೭೧ರ ಅವಧಿಯಲ್ಲಿ ಕೆಲ ಕಾಲ ವಿರೋಧ ಪಕ್ಷದಲ್ಲಿದ್ದರು. ಯಾವುದೇ ಸಂದರ್ಭದಲ್ಲಿ ವಿರೋಧ ಪಕ್ಷದವರು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿದಾಗ, ಆ ನಿರ್ಣಯ ಕೆಲವೇ ಕೆಲವು ಗಂಟೆಗಳಲ್ಲಿ ತೀರ್ಮಾನವಾಗಬೇಕು, ನಮಗೆ ಹೆಚ್ಚಿನ ಬೆಂಬಲವಿದೆ ಎಂದು ಆಡಳಿತ ಪಕ್ಷದವರು ಹೇಳುವುದು ಸರಿಯಲ್ಲ. ಹಿಂದೆ ವೀರೇಂದ್ರ ಪಾಟೀಲರಿಗೂ ಬೆಂಬಲವಿತ್ತು, ನಿಜಲಿಂಗಪ್ಪನವರಿಗೂ ಹೆಚ್ಚಿನ ಬೆಂಬಲವಿತ್ತು.

ಶ್ರೀ ಡಿ. ದೇವರಾಜ ಅರಸ್—ಇದನ್ನೆಲ್ಲ ನೀವು ಕೆದಕುತ್ತಾ ಹೋದರೆ, ನಾನೂ ಹೇಳುತ್ತಾ ಹೋಗಬೇಕಾಗುತ್ತದೆ.

ಶ್ರೀ ಆರ್. ಗುಂಡೂರಾವ್—ತಾವು ಮಾತನಾಡುವಾಗ ನಾನು ಸಮಾಧಾನದಿಂದ ಕೇಳುತ್ತಾ ಕುಳಿತ್ತಿದ್ದೆನು. ಈಗ ನಾನು ಮಾತನಾಡುವಾಗ, ದಯವಿಟ್ಟು ಸಮಾಧಾನವಾಗಿ ಕೇಳಿ. ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ ಸಂದರ್ಭಗಳಲ್ಲಿ ನಾಲ್ಕಾರು ದಿವಸ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ. ಬಲದ ಆಧಾರದ ಮೇಲೆ ಸರ್ಕಾರ ಗೆದ್ದಿರಬಹುದು, ಅದು ಬೇರೆ ವಿಷಯ. ನಾನದನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಸಭೆಯ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವವರು, ಈ ಸಭೆಯ ಸತ್ಸಂಪ್ರದಾಯವನ್ನು ಎತ್ತಿ ಹಿಡಿಯಬೇಕೆಂದು ಹೇಳುತ್ತೇನೆ. ಏಕೆಂದರೆ, ನಮ್ಮ ಈ ಸಭೆಯ ನಡವಳಿಕೆಯ ನಿಯಮ ೧೫೩ರಲ್ಲಿ ಸ್ಪಷ್ಟವಾಗಿ ಹೇಳಿದೆ. ಸರಿಯಾದ ಸಂಖ್ಯೆಯ ಸದಸ್ಯರು ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಂದಾಗ, ಅದು ಕಾನೂನು ಪ್ರಕಾರ ಒಪ್ಪಿಗೆ ಪಡೆದ ಮೇಲೆ ಮಾನ್ಯ ಅಧ್ಯಕ್ಷರು ಮಾರನೆ ದಿವಸ ಅಥವಾ ಮೂರು ದಿವಸಗಳೊಳಗಾಗಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿಯಮ ೧೫೩ರಲ್ಲಿರುವುದನ್ನು ಯಾರು ಕಣ್ಣು ಮುಚ್ಚಿಕೊಂಡು ಓದಿದರೂ ಸ್ಪಷ್ಟವಾಗುತ್ತದೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿರುವಂತೆ ಹೋಗೋಣವೆಂದು ತಿಳಿಸಿದರು. ಎಷ್ಟೋ ಸಂದರ್ಭಗಳಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿ ತೀರ್ಮಾನದಂತೆ ಸಭೆಯನ್ನು ಮುನ್ನಿಸಿಲ್ಲ, ಒಂದೊಂದು ಸಂದರ್ಭದಲ್ಲಿ ೨೦ನೇ ತಾರೀಖು ಮುಗಿಯಬೇಕೆಂದು ಸಮಿತಿ ತೀರ್ಮಾನಿಸಿದ್ದರೆ, ಅದು ಸಭೆ ಅಂದು ಮುಗಿಯದೆ ಮುಂದೂಡಲ್ಪಟ್ಟ ಉದಾಹರಣೆಗಳಿವೆ. ಸಾಮಾನ್ಯವಾಗಿ ಕಾರ್ಯಕಲಾಪಗಳ ಸಲಹಾ ಸಮಿತಿ ಆಪತ್ತಿನ ಸಂದರ್ಭ ಮತ್ತು ವಿಷಯಕ್ಕನುಗುಣವಾಗಿ ತೀರ್ಮಾನ ಕೈಗೊಳ್ಳುತ್ತದೆ ಕಾರ್ಯಕಲಾಪಗಳ ಸಲಹಾ ಸಮಿತಿ ನಿರ್ಧರಿಸಿದ್ದ ದಿನ ಸಂಬಂಧಪಟ್ಟ ವಿಷಯಗಳು ಮುಗಿಯದೆ ಮುಂದಿನ ದಿವಸಕ್ಕೆ ಹೋದ ಸಂದರ್ಭಗಳಲ್ಲಿ ವಿರೋಧ ಪಕ್ಷದವರು ಸರ್ಕಾರದೊಂದಿಗೆ ಸಹಕಾರ ನೀಡಿದ್ದಾರೆ. ನಿಲುವಳಿ ಸೂಚನೆ ಮಂಡಿಸಿದಾದ ಮೇಲೆ ತೀರ್ಮಾನ ಯಾವ ರೀತಿಯದಾದರೂ ಆಗಬಹುದು, ಸರ್ಕಾರ ಗೆಲ್ಲಬಹುದು ಅಥವಾ ಸೋಲಬಹುದು. ಅದು ನಮ್ಮ ಕೈಯಲ್ಲಿಲ್ಲ. ಈಗ ವಿರೋಧ ಪಕ್ಷದ ವತಿಯಿಂದ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಬೇಕಾದ ಸದಸ್ಯರ ಸಂಖ್ಯೆಯನ್ನು ತಮಗೆ ತೋರಿಸಲಾಗಿದೆ. ಮತ್ತು ಅದು ನಿಯಮಾನುಸಾರ ಒಪ್ಪಿತವಾಗಿದೆ. ಆ ದೃಷ್ಟಿಯಿಂದಲೇ ನಿರ್ಣಯವನ್ನು ಚರ್ಚೆ ಮಾಡಲು ನಮಗೆ ಸುಮಾರು ಇಪ್ಪತ್ತೈದು ಗಂಟೆಗಳ ಕಾಲಾವಧಿಯಾದರೂ ಅವಕಾಶ ಬೇಕೆಂದು ನಾವು ಅರಿಕೆ ಮಾಡಿಕೊಂಡಿದ್ದೇವೆ. ಆದುದರಿಂದ ಮಾನ್ಯ ಉಪಾಧ್ಯಕ್ಷರೆ, ತಾವೊಂದು ತೀರ್ಮಾನಕ್ಕೆ ಬನ್ನಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕುಳಿತುಕೊಂಡು ನಮ್ಮನ್ನು ಏನನ್ನೂ ಕೇಳಲಿಲ್ಲ. ನನಗೆ ಬೆಂಬಲವಿದ್ದೇ ಇದೆ. ತುರ್ತು ಕೆಲಸವಿದೆ, ಅರ್ಧ ದಿವಸದಲ್ಲೇ ಇದು ಮುಗಿಯಬೇಕು ನಂತರ ತೀರ್ಮಾನಕ್ಕೆ ಬರೋಣ, ಅದೆಲ್ಲಾ ಹೀಗೆ ಆಗಬೇಕು, ಅದನ್ನು ಬಿಟ್ಟು, ನಾವು ಹೋಗೋದೇ ಇಲ್ಲ ಎಂದು ಹೇಳುವ ಮಾತುಗಳು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಮತ್ತು ಅಧಿಕಾರ ಶಾಹಿಯನ್ನು ವಿರೋಧಿಸುವವರ ಬಾಯಿಂದ ಬರುವ ಮಾತಲ್ಲ. ಆದುದರಿಂದ ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವಿಷಯದ ಬಗ್ಗೆ ವಿರೋಧ ಪಕ್ಷದ ನಾಯಕರನ್ನು ಮತ್ತು ಇತರ ರಾಜಕೀಯ ಮುಖಂಡರನ್ನು ಕರೆದು ಚರ್ಚೆ ಮಾಡಿ ಒಂದು ತೀರ್ಮಾನವನ್ನು ಕೈಗೊಳ್ಳಬೇಕು. ಕರ್ನಾಟಕ

ವಿಧಾನ ಸಭೆಯು ಬೇರೆ ಯಾವುದೇ ರಾಜ್ಯದ ವಿಧಾನ ಸಭೆಗಿಂತಲೂ ಕಡಿಮೆ ಇಲ್ಲವೆನ್ನುವಂತೆ ತಾವು ನಿಷ್ಪಕ್ಷಪಾತವಾದ ತೀರ್ಪು ನೀಡಿ, ಈ ಸಭೆಯ ಘನತೆಯನ್ನು ಎತ್ತಿ ಹಿಡಿಯಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

MADAM DEPUTY SPEAKER—Now I will adjourn the House for half an hour. I would request the leaders of different parties to come to my chamber. Now the House stands adjourned for half an hour.

(The House adjourned at 3-45 P.M.)

(The House reassembled at 4.35 p.m.)

[MADAM DEPUTY SPEAKER in the Chair]

PAPERS LAID ON THE TABLE

SECRETARY.—I beg to lay on the Table of the House, the Fourth List of Unstarred Questions and Answers of the First Session and Second list of Unstarrted Questions and Answers of the Second Session.

Second Session 2nd List of Unstarred Questions and Answers.

ಸಹ ಕಾಯಿದೆಯ ಪುನರ್ ಪರಿಶೀಲನೆ

3 SRI P. RAMDEV (Malleswaram).—Will the Minister for Co-operation be pleased to state :—

(ಅ) ಸಹಕಾರ ಕಾಯಿದೆಯ ಪುನರ್ ಪರಿಶೀಲನೆಗಾಗಿ ಸಮಿತಿಯನ್ನು ರಚಿಸಲಾಗಿದೆಯೇ ;

(ಆ) ಆ ಸಮಿತಿಯ ಸದಸ್ಯರುಗಳು ಯಾರು ಮತ್ತು ಅವರ ಸಹಕಾರಿ ಕ್ಷೇತ್ರದ ಅನುಭವಗಳೇನು ;

(ಇ) ಈ ಸದಸ್ಯರನ್ನು ನೇಮಿಸಿದಾಗ ಯಾರ ಸಲಹೆ ಪಡೆಯಲಾಯಿತು ?

SRI V. M. KUSNUR (Minister for Co-operation).—

(ಅ) ಹೌದು.

(ಆ) ಪಟ್ಟಿ ಲಗತ್ತಿಸಿದೆ ಮತ್ತು ಇವರೆಲ್ಲರೂ ಸಹಕಾರಿ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರು.

(ಇ) ಉದ್ಭವಿಸುವುದಿಲ್ಲ.

Administration of Bangalore City Corporation

(4) SRI P. RAMDEV (Malleswaram).—Will the Minister for Municipal Administration be pleased to state :—

(ಅ) ಬೆಂಗಳೂರು ನಗರ ಕಾರ್ಪೊರೇಷನ್ ಆಡಳಿತ ಯಂತ್ರದಲ್ಲಿ ದಕ್ಷತೆ ಹೆಚ್ಚಿಸಲು ಸರಕಾರ ಕೈಗೊಂಡ ಕ್ರಮಗಳೇನು ?